# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಫೆಬ್ರವರಿ 01, 2021

ಸಂಪುಟ : 47 ಸಂಚಿಕೆ : 273 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com




## ಪಲ್ಸ್ ಪೋಲಿಯೋಗೆ ಎಸ್ಸೆಸ್ ಚಾಲನೆ

ದಾವಣಗೆರೆ, ಜ.31- ನಗರದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಹಿರಿಯ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಅವರು ಇಂದು ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು 5 ವರ್ಷದೊಳಗಿನ ಪ್ರತಿಯೊಬ್ಬ ಮಕ್ಕಳಿಗೂ ಪಲ್ಸ್ ಪೋಲಿಯೋ ಹನಿ ಹಾಕಿಸುವ ಮೂಲಕ ಶಾಶ್ವತ ಅಂಗವೈಕಲ್ಯತೆಯನ್ನು ತಡೆಗಟ್ಟಲು ಸರ್ಕಾರ (5ನೇ ಪುಟಕ್ಕೆ)

## ಚಿತ್ರಮಂದಿರಗಳ ಶೇ.100 ಸೀಟು ಭರ್ತಿಗೆ ಅನುಮತಿ

ನವದೆಹಲಿ, ಜ. 31 - ದೇಶಾದ್ಯಂತ ಇರುವ ಚಿತ್ರಮಂದಿರಗಳು ಕೊರೊನಾ ಶಿಷ್ಟಾಚಾರಗಳೊಂದಿಗೆ ಪೂರ್ಣ ಸಾಮರ್ಥ್ಯದಲ್ಲಿ ಕಾರ್ಯ ನಿರ್ವಹಿಸಲು ಅವಕಾಶ ಮಾಡಿಕೊಡುವುದಾಗಿ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಪ್ರಕಾಶ್ ಜಾವಡೇಕರ್ ತಿಳಿಸಿದ್ದಾರೆ.

ಸೂಕ್ತ ದೈಹಿಕ ಅಂತರ, ಮಾಸ್ಕ್ ಕಡ್ಡಾಯ ಹಾಗೂ ಸ್ಯಾನಿಟೈಸೇಷನ್ ಜೊತೆಗೆ ಚಿತ್ರವನ್ನು ಪ್ರದರ್ಶಿಸಬೇಕು ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಪ್ರಕಟಿಸಿರುವ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ. ಸೋಮವಾರದಿಂದ (3ನೇ ಪುಟಕ್ಕೆ)

# ಆರ್ಥಿಕತೆಗೆ ಲಸಿಕೆ ನಿರೀಕ್ಷೆ

**ಇಂದು ಮೋದಿ ಸರ್ಕಾರದ 9ನೇ ಬಜೆಟ್ ಮಂಡನೆ**

ನವದೆಹಲಿ, ಜ. 31 - ಕೊರೊನಾದಿಂದ ದೇಶದ ಆರ್ಥಿಕತೆ ತತ್ತರಿಸಿರುವ ನಡುವೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸೋಮವಾರ ಬಜೆಟ್ ಮಂಡಿಸಲಿದ್ದು, ಈ ಬಜೆಟ್ ತತ್ತರಿಸಿದ ಆರ್ಥಿಕತೆಗೆ ಲಸಿಕೆಯಾಗಲಿದೆಯೇ ಅಥವಾ ಅಂಕಿ-ಅಂಶಗಳ ಲೆಕ್ಕಾಚಾರದಲ್ಲೇ ಮುಗಿಯಲಿದೆಯೇ ಎಂಬ ಕುತೂಹಲ ಎಲ್ಲರಲ್ಲಿದೆ.

ದೇಶ ಕೊರೊನಾ ಬಿಕ್ಕಟ್ಟಿನಿಂದ ನಿಧಾನವಾಗಿ ಹೊರ ಬರುತ್ತಿದೆ. ಈ ನಡುವೆಯೇ ಮೋದಿ ಸರ್ಕಾರ ಮಧ್ಯಂತರ ಬಜೆಟ್ ಸೇರಿದಂತೆ ಒಂಭತ್ತನೇ ಬಜೆಟ್ ಮಂಡಿಸುತ್ತಿದೆ. ಉದ್ಯೋಗ ಸೃಷ್ಟಿ ಹಾಗೂ ಗ್ರಾಮೀಣಾಭಿವೃದ್ಧಿಗೆ ಬಜೆಟ್‌ನಲ್ಲಿ ಒತ್ತು ನೀಡುವ ನಿರೀಕ್ಷೆ ಇದೆ. ಅಭಿವೃದ್ಧಿ ಯೋಜನೆಗಳಿಗೆ ಹೆಚ್ಚಿನ ಅನುದಾನ ಹಾಗೂ ತೆರಿಗೆದಾರರ ಕೈಯ್ಯಲ್ಲಿ ಹೆಚ್ಚು ಹಣ ಉಳಿಸುವ ಜೊತೆಗೆ ವಿದೇಶಿ ಹೂಡಿಕೆ ಆಕರ್ಷಿಸುವ ಕ್ರಮಗಳ ಸಾಧ್ಯತೆಯೂ ಇದೆ.

2019ರಲ್ಲಿ ಮೊದಲ ಬಜೆಟ್ ಮಂಡಿಸಿದ್ದ ಸೀತಾರಾಮನ್, ಸಂಪ್ರದಾಯದಂತೆ ಸೂಟ್‌ಕೇಸ್‌ನಲ್ಲಿ ಬಜೆಟ್ ತರುವ ಬದಲು ಕೆಂಪು ಬಟ್ಟೆಯ ಚೀಲದಲ್ಲಿ ಬಜೆಟ್ ತಂದಿದ್ದರು. ಈ ಬಾರಿಯ ಬಜೆಟ್ ಹಿಂದೆಂದಿಗಿಂತಲೂ ಭಿನ್ನವಾಗಿ ರಲಿದೆ ಎಂದು ಸಚಿವೆ ಈ ಹಿಂದೆ ಹೇಳಿದ್ದರು.

ಕೊರೊನಾದಿಂದ ನಾಶವಾಗಿರುವ ಆರ್ಥಿಕತೆಯನ್ನು ಮತ್ತೆ ಕಟ್ಟುವ ಕೆಲಸ ಆರಂಭವಾಗಬೇಕಿದೆ. ಇದು ಕೇವಲ ಲೆಕ್ಕಪತ್ರಗಳ ಹೊಂದಾಣಿಕೆಯಿಂದ ಇಲ್ಲವೇ ಹಳೆ ಯೋಜನೆಗಳಿಗೆ ಹೊಸ ಸ್ವರೂಪ ನೀಡುವುದರಿಂದ ಆಗದು ಎಂದು (5ನೇ ಪುಟಕ್ಕೆ)






# ದಾವಣಗೆರೆ ಕ್ಲಬ್ : ಮತ್ತಿಹಳ್ಳಿ ಗುಂಪಿಗೆ ಅಧಿಕ ಸ್ಥಾನ




ದಾವಣಗೆರೆ,ಜ.31- ಸ್ಥಳೀಯ ಪ್ರತಿಷ್ಠಿತ ಕ್ರೀಡಾ ಕ್ಲಬ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ದಾವಣಗೆರೆ ಕ್ಲಬ್ ಆಡಳಿತ ಮಂಡಳಿಗೆ ಇಂದು ನಡೆದ ಚುನಾವಣೆಯಲ್ಲಿ ಕೈಗಾರಿಕೋದ್ಯಮಿ ಮತ್ತಿಹಳ್ಳಿ ವೀರಣ್ಣ ಅವರ ನೇತೃತ್ವದ ಗುಂಪಿಗೆ ಅತ್ಯಧಿಕ ಸ್ಥಾನಗಳು ಲಭಿಸಿವೆ.

ಆಡಳಿತ ಮಂಡಳಿಯ ಒಟ್ಟು 11 ಸ್ಥಾನಗಳ ಪೈಕಿ ಮತ್ತಿಹಳ್ಳಿ ವೀರಣ್ಣ ಅವರ ನೇತೃತ್ವದ ಗುಂಪಿಗೆ 6 ಮತ್ತು ಅವರ ಪ್ರತಿಸ್ಪರ್ಧಿ ನಿವೃತ್ತ ಅಭಿಯಂತರ ಯು.ಜಿ. ಶಿವಕುಮಾರ್ ಅವರ ನೇತೃತ್ವದ ಗುಂಪಿಗೆ 5 ಸ್ಥಾನಗಳು ಲಭಿಸಿವೆ.

ಮತ್ತಿಹಳ್ಳಿ ವೀರಣ್ಣ ಅವರಲ್ಲದೇ, ಅವರ ಗುಂಪಿನಿಂದ ಎ.ಬಿ.ಚಂದ್ರಶೇಖರ್, ಎಸ್.ಜಿ. ಉಳವಯ್ಯ, ಹೆಚ್.ಸಿ. ಲಿಂಗರಾಜ ವಾಲಿ, ಹೆಚ್. ವಿ. ರುದ್ರೇಶ್ ಮತ್ತು ಎಸ್. ಕೆ. ಪ್ರಶಾಂತ್ ಗುಪ್ತಾ ಅವರುಗಳು ಜಯ ಗಳಿಸಿದ್ದಾರೆ. (5ನೇ ಪುಟಕ್ಕೆ)


## ಶ್ರೀ ಅನ್ನಪೂರ್ಣೇಶ್ವರಿ ಊಟ ಮತ್ತು ಉಪಹಾರ ಮಂದಿರ



ನವೀಕರಣದೊಂದಿಗೆ ಇಂದು ಶುಭಾರಂಭ

ದಿನಾಂಕ 01.02.2021ನೇ ಸೋಮವಾರ

ಜೋಳದ ರೊಟ್ಟಿ ಊಟ, ಚಪಾತಿ ಊಟ ದೊರೆಯುತ್ತದೆ
ಪ್ರತಿ ಸೋಮವಾರ ಹೋಳಿಗೆ ಊಟ ದೊರೆಯುತ್ತದೆ.

ಪ್ರೊ. ಬಿ.ಕೆ. ಗಣೇಶ ಬಿಸಲೇರಿ
ಮೊ. : 88847 46258 96206 55669



# 2994/3ಎ, 7ನೇ ಮೇನ್, 4ನೇ ಕ್ರಾಸ್, ಸ್ವಿಮ್ಮಿಂಗ್ ಫೂಲ್ ಹತ್ತಿರ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
*Student Mess*


## ಈ ಬಾರಿ ಪ್ರತ್ಯೇಕ ಕೃಷಿ ಬಜೆಟ್ ಇಲ್ಲ



ದಾವಣಗೆರೆ, ಜ.31- ಈ ಬಾರಿ ರಾಜ್ಯದಲ್ಲಿ ಪ್ರತ್ಯೇಕ ಕೃಷಿ ಬಜೆಟ್ ಮಂಡನೆ ಮಾಡಲಾಗುತ್ತಿಲ್ಲ. ನಾಳೆ ಕೇಂದ್ರದಿಂದ ಒಳ್ಳೆಯ ಕೃಷಿ ಬಜೆಟ್ ನೀಡುವ ನಿರೀಕ್ಷೆ ಇದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ತಿಳಿಸಿದರು.ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲೆಂದು ಇಂದು ಸಂಜೆ ನಗರಕ್ಕಾಗಮಿಸಿದ್ದ ಅವರು ತಮ್ಮನ್ನು ಭೇಟಿ ಮಾಡಿದ ಪತ್ರಕರ್ತರೊಂದಿಗೆ ಮಾತನಾಡುತ್ತಾ, ಕೇಂದ್ರ ಹಾಗೂ ರಾಜ್ಯ (5ನೇ ಪುಟಕ್ಕೆ)


## ಶಿವಾಜಿ ಮೂಲವೇ ಕರ್ನಾಟಕ



ಬೆಳಗಾವಿ, ಜ. 31 - ಛತ್ರಪತಿ ಶಿವಾಜಿ ಮಹಾರಾಜರ ಮೂಲವೇ ಕರ್ನಾಟಕ ಎಂದಿರುವ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ, ಇತಿಹಾಸವೇ ಗೊತ್ತಿರದ ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಕುರ್ಚಿ ಉಳಿಸಿಕೊಳ್ಳಲು ಗಡಿ ವಿವಾದ ಕೆದಕುತ್ತಿದ್ದಾರೆ ಎಂದು ಉಪ ಮುಖ್ಯಮಂತ್ರಿ ಗೋವಿಂದ್ ಕಾರಜೋಳ ಅವರು ತಿರುಗೇಟು ನೀಡಿದ್ದಾರೆ. ಪತ್ರಕರ್ತರೊಂದಿಗೆ ಮಾತನಾಡಿದ (5ನೇ ಪುಟಕ್ಕೆ)









## ಬಸವರಾಜ ಕೇರಂ ಅವರ ಮಾತೃಶ್ರೀ ನಾಗೂರು ನಾಗಮ್ಮ ನಿಧನ



ದಾವಣಗೆರೆ ಕೆ.ಟಿ.ಜೆ. ನಗರ 2ನೇ ಮೇನ್, 13ನೇ ಕ್ರಾಸ್ ವಾಸಿ, ಎಸ್. ಬಸವರಾಜ (ಬ್ಲ್ಯೂ ಮೌಂಟೇನ್) ಇವರ ತಾಯಿ **ಶ್ರೀಮತಿ ನಾಗೂರು ನಾಗಮ್ಮ** ಅವರು ದಿನಾಂಕ 31.01.2021ರ ಭಾನುವಾರ ಮಧ್ಯಾಹ್ನ 3.40 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 90 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 01.02.2021ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

- ದುಃಖತಪ್ತ ಕುಟುಂಬ ವರ್ಗ, ಮೊ. : 94484 15049

## ಶಾಮನೂರು ಕೆ.ಎಂ. ಅರುಣ್ ನಿಧನ



ದಾವಣಗೆರೆ ಸಿಟಿ ಶಾಮನೂರು ವಾಸಿ ಹಳ್ಳಿಗೌಡ್ರು ರಾಮಚಂದ್ರಪ್ಪನವರ ಪುತ್ರಿ ಶ್ರೀಮತಿ ಗೀತಮ್ಮ ಮಹೇಶ್ವರಪ್ಪನವರ ಜೇಷ್ಠ ಪುತ್ರ - ಮೆಕ್ಯಾನಿಕಲ್ ಇಂಜಿನಿಯರ್ **ಕೆ.ಎಂ. ಅರುಣ್** ಅವರು ದಿನಾಂಕ 31.1.2021ರ ಭಾನುವಾರ ಬೆಳಿಗ್ಗೆ 8.30ಕ್ಕೆ ಬೆಂಗಳೂರಿನಲ್ಲಿ ಹೃದಯಾಘಾತದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 32 ವರ್ಷ ವಯಸ್ಸಾಗಿತ್ತು. ತಾಯಿ, ಪತ್ನಿ, ಸಹೋದರ-ಸಹೋದರಿ, ಭಾವ, ಅಜ್ಜ, ಸೋದರ ಮಾವಂದಿರು, ಚಿಕ್ಕಪ್ಪಂದಿರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 1.2.2021ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಅರುಣ್, ಭಾರತೀಯ ರೈತ ಒಕ್ಕೂಟದ ಜಿಲ್ಲಾಧ್ಯಕ್ಷರೂ, ಬಿಜೆಪಿ ರೈತ ಮುಖಂಡರೂ ಆದ ಶಾಮನೂರು ಹೆಚ್. ಆರ್. ಲಿಂಗರಾಜ್ ಅವರ ಅಳಿಯ.

- ದುಃಖತಪ್ತ ಕುಟುಂಬ ವರ್ಗ
ಕಾಳಪ್ಪಳರ ವಂಶಸ್ಥರು, ಮೆಳ್ಳೇಕಟ್ಟೆ, ಹಳ್ಳಿಗೌಡ್ರು ವಂಶಸ್ಥರು, ಶಾಮನೂರು, ರಾಮಗೊಂಡನಹಳ್ಳಿ ವಂಶಸ್ಥರು, ಬಾಡ.
ಮೊಬೈಲ್ : 99726-11335, 98444-65560

# ಪೋಲಿಯೋ ಮುಕ್ತ ಸಮಾಜ ನಿರ್ಮಿಸಲು ಎಲ್ಲರ ಸಹಕಾರ ಅಗತ್ಯ

## ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಹರಪನಹಳ್ಳಿ ತಾಲ್ಲೂಕು ಐಎಂಎಫ್ ಅಧ್ಯಕ್ಷ ಡಾ.ಮಹೇಶ್



ಹರಪನಹಳ್ಳಿ, ಜ.31- ಪೋಲಿಯೋ ನಿರ್ಮೂಲನೆಗೆ ಆರೋಗ್ಯ ಇಲಾಖೆ ಆಯೋಜಿಸಿರುವ ಕಾರ್ಯಕ್ರಮಕ್ಕೆ ಖಾಸಗಿ ವೈದ್ಯಕೀಯ ಸಂಘವು ಸಂಪೂರ್ಣ ಸಹಕಾರ ನೀಡಿ ಪೋಲಿಯೋ ಮುಕ್ತ ಸಮಾಜವನ್ನು ನಿರ್ಮಿಸೋಣ ಎಂದು ತಾಲ್ಲೂಕು ಐಎಂಎಫ್ ಅಧ್ಯಕ್ಷ ಡಾ.ಮಹೇಶ್ ಮನವಿ ಮಾಡಿದರು.

ಚಿಕ್ಕೇರಿ ಗುಂಡಿ ಬಳಿ ಇರುವ ನಗರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಭಾನುವಾರ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಹಾಮಾರಿ ಪೋಲಿಯೋವನ್ನು ಹೊಡೆದೋಡಿಸಲು ಸರ್ಕಾರ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದರಿಂದ ದೇಶದಲ್ಲಿ ಪೋಲಿಯೋ ಪೀಡಿತರ ಸಂಖ್ಯೆ ಕ್ಷೀಣಿಸಿದ್ದು, ಮತ್ತೆ ಮರುಕಳಿಸದಂತೆ ಜಾಗೃತರಾಗಿರಲು 5 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯವಾಗಿ ಲಸಿಕೆ ಹಾಕಿಸಬೇಕು ಎಂದರು.

ತಾಲ್ಲೂಕು ವೈದ್ಯಾಧಿಕಾರಿ ಡಾ.ವೆಂಕಟೇಶ್ ಮಾತನಾಡಿ, 2011 ರಿಂದ ದೇಶದಲ್ಲಿ ಪೋಲಿಯೋ ಪ್ರಕರಣಗಳು ಗೋಚರಿಸಿಲ್ಲ. ನೆರೆ ದೇಶಗಳಾದ ಪಾಕಿಸ್ತಾನ, ಬಾಂಗ್ಲಾಗಳಲ್ಲಿ ಪೋಲಿಯೋ ಪ್ರಕರಣಗಳು ಇರುವುದರಿಂದ ಭಾರತದಲ್ಲಿ ಮುಂಜಾಗ್ರತೆಗಾಗಿ ವರ್ಷಕ್ಕೆ ಒಂದು ಬಾರಿ ಲಸಿಕೆ ಹಾಕಲಾಗುತ್ತಿದೆ. ತಾಲ್ಲೂಕಿನಲ್ಲಿ 191 ಕೇಂದ್ರಗಳಲ್ಲಿ ಲಸಿಕೆ ಹಾಕಲಾಗುತ್ತಿದೆ. 5 ವರ್ಷದೊಳಗಿನ ಒಟ್ಟು 29,884 ಮಕ್ಕಳನ್ನು ಗುರುತಿಸಲಾಗಿದೆ. ಮನೆ ಮನೆಗೂ ತೆರಳಿ ಲಸಿಕೆಯನ್ನು ಹಾಕಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ವಿವರಿಸಿದರು.

ತಾಲ್ಲೂಕು ಪಂಚಾಯ್ತಿ ಉಪಾಧ್ಯಕ್ಷ ಎಲ್. ಮಂಜ್ಯಾನಾಯ್ಕ್ ಅವರು ಮಕ್ಕಳಿಗೆ ಪೋಲಿಯೋ ಲಸಿಕೆ ಹನಿ ಹಾಕಿ ಮಾತನಾಡಿ, ಹಣ, ಆಸ್ತಿ, ಅಧಿಕಾರ ಬಡವ ಯಾರೇ ಆಗಿರಲಿ ಆರೋಗ್ಯವಂತರಾಗಿದ್ದರೆ ಮಾತ್ರ ಅನುಭೋಗ ಮಾಡಬಹುದು. ಆದ್ದರಿಂದ ಮೊದಲು ಆರೋಗ್ಯಕ್ಕೆ ಮಹತ್ವ ನೀಡಿ ಮಕ್ಕಳನ್ನು ಸದೃಢರಾಗಿರಲು ಪೋಲಿಯೋದಿಂದ ಮುಕ್ತರಾಗಿಸಲು ಕಡ್ಡಾಯವಾಗಿ ಲಸಿಕೆ ಹಾಕಿಸಬೇಕು. ಆರೋಗ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಸ್ಪಂದಿಸಿ ಪೋಲಿಯೋ ಮುಕ್ತ ಭಾರತ ನಿರ್ಮಾಣ ಮಾಡಬೇಕು ಎಂದರು.

ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಅಧ್ಯಕ್ಷ ಅರುಣ ಪೂಜಾರ್ ಮಾತನಾಡಿ, ಉಜ್ವಲ ಭಾರತದ ಭವಿಷ್ಯಕ್ಕೆ ಸದೃಢ ಆರೋಗ್ಯವಂತ ಮಕ್ಕಳು ಬೇಕು. ಪೋಲಿಯೋ ರೋಗ ಮಕ್ಕಳಲ್ಲಿ ಶಾಶ್ವತ ಅಂಗವಿಕಲತೆ ಉಂಟು ಮಾಡುತ್ತದೆ. ಪ್ರತಿ ವರ್ಷ ನಡೆಯುತ್ತಿರುವ ಪಲ್ಸ್ ಪೋಲಿಯೋ ಲಸಿಕೆಯ ಹನಿಗಳನ್ನು 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ತಪ್ಪದೆ ಹಾಕಿಸಿ ಸದೃಢ ಭಾರತ ನಿರ್ಮಾಣಕ್ಕೆ ಭದ್ರ ಬುನಾದಿ ಹಾಕಬೇಕು ಎಂದರು.

ಪಟ್ಟಣದ ಒಂದನೇ ವಾರ್ಡ್ ಚಿತ್ತಾರಗೇರಿಯಲ್ಲಿ ನಡೆದ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಪುರಸಭೆ ಸದಸ್ಯ ಜಾಕೀರ್ ಸರ್ಖಾವಸ್ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಡಾ. ವಿಜಯಕುಮಾರ್, ಡಾ.ಹಾಲಸ್ವಾಮಿ, ಡಾ. ಶ್ವೇತ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಹೆಚ್. ಗೌರಮ್ಮ, ಭುವನೇಶ್ವರಿ, ಗೃಹರಕ್ಷಕ ಅಧಿಕಾರಿ ಮಂಜುನಾಥ ಸ್ವಾಮಿ, ವಾಗೀಶ್ ಪೂಜಾರ್ ಹಾಗೂ ಇತರರು ಭಾಗವಹಿಸಿದ್ದರು.

# ಪೆಟ್ರೋಲಿಯಂ ಸಂರಕ್ಷಣೆಗೆ ಸೈಕಲ್ ಜಾಥಾ



ದಾವಣಗೆರೆ, ಜ.31- ಪೆಟ್ರೋಲಿಯಂ ಉತ್ಪನ್ನಗಳನ್ನು ಸಂರಕ್ಷಿಸುವಂತೆ ನಗರದಲ್ಲಿ ಇಂದು ಭಾರತ್ ಪೆಟ್ರೋಲಿಯಂ ಹಾಗೂ ಸ್ಮಾರ್ಟ್ ಸಿಟಿ ವತಿಯಿಂದ ಸೈಕಲ್ ಜಾಥಾ ಮೂಲಕ ಜನಜಾಗೃತಿ ಮೂಡಿಸಲಾಯಿತು.

ಶಾಮನೂರು ರಸ್ತೆಯಲ್ಲಿರುವ ಭರತ್ ಪೆಟ್ರೋಲ್ ಬಂಕ್ ಬಳಿ ಜಾಥಾಕ್ಕೆ ನಗರ ಪಾಲಿಕೆ ಆಯುಕ್ತ ರವೀಂದ್ರ ಮಲ್ಲಾಪುರ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಈ ಸಂಪನ್ಮೂಲವು ಪ್ರಕೃತಿಯಲ್ಲಿ ಸೀಮಿತವಾದ ಕಾರಣ ಪೆಟ್ರೋಲಿಯಂ ಉತ್ಪನ್ನಗಳನ್ನು ಸಂರಕ್ಷಿಸಿ, ಮುಂದಿನ ಪೀಳಿಗೆಗೂ ಈ ಸಂಪನ್ಮೂಲ ಸಿಗುವಂತಾಗಲು ಪ್ರತಿಯೊಬ್ಬರೂ ಇಂಧನವನ್ನು ಸಂರಕ್ಷಿಸಲು ಮುಂದಾಗಬೇಕೆಂದರು.

ಎಸ್ಪಿ ಹನುಮಂತರಾಯ ಸೈಕಲ್ ಓಡಿಸುವ ಮೂಲಕ ಜಾಥಾದಲ್ಲಿ ಭಾಗವಹಿಸಿದ್ದರು. ಜಾಥಾ ನಗರದ ಗುಂಡಿ ಸರ್ಕಲ್ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಸೈಕಲ್ ಓಡಿಸುವುದರಿಂದ ಆರೋಗ್ಯ ವೃದ್ಧಿಸುವುದಲ್ಲದೇ, ಪರಿಸರ ಸಹ ಸ್ವಚ್ಛವಾಗಿರುವುದು ಹಾಗೂ ಇಂಧನವನ್ನೂ ಸಹ ಉಳಿಸಿದಂತಾಗುತ್ತದೆ ಎಂದು ಎಸ್ಪಿ ತಿಳಿಸಿದರು.

ಫಿಟ್ ಇಂಡಿಯಾ ಆಂದೋಲನವನ್ನು ಉತ್ತೇಜಿಸುವ ಮೂಲಕ ನಾವು ಮಾಲಿನ್ಯವನ್ನು ಕಡಿಮೆ ಮಾಡಬಹುದು ಮತ್ತು ವೈಯಕ್ತಿಕ ಫಿಟ್ನೆಸ್ ಅನ್ನು ಸುಧಾರಿಸಬಹುದು ಎಂದು ತೈಲ ಸಂರಕ್ಷಣೆಯ ಮಹತ್ವದ ಬಗ್ಗೆ ಏರಿಯಾ ಮ್ಯಾನೇಜರ್ ಅವೇಸ್ ಕಾಶಿಫ್ ಹೇಳಿದರು.

ಆರ್ ಟಿಓ ಅಧಿಕಾರಿ ಶ್ರೀಧರ್ ಮಲ್ನಾಡ್, ಸಂಚಾರ ನಿಯಮಗಳನ್ನು ಪಾಲಿಸಿ, ಸುರಕ್ಷಿತ ಚಾಲನೆಯಿಂದ ಅಪಘಾತವನ್ನು ತಪ್ಪಿಸಬಹುದೆಂದರು.

ಜಾಥಾದಲ್ಲಿ ಮಹಿಳೆಯರು ಸೇರಿದಂತೆ ನೂರಾರು ಸೈಕಲ್ ಪ್ರಿಯರು ಭಾಗವಹಿಸಿದ್ದರು.


॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

**'ಗುರುಲಿಂಗ ಜಂಗಮ ಆರಾಧನೆ' ಆಹ್ವಾನ ಪತ್ರಿಕೆ**

**ಮುಕ್ತೇನಹಳ್ಳಿ ಮಠದ ಲಿಂ॥ ಶ್ರೀಮತಿ ಗುರುಶಾಂತಮ್ಮ, ಲಿಂ॥ ವೀರಭದ್ರಯ್ಯ ಇವರ ಮಗನಾದ ಶ್ರೀ ಜಿ.ಎಂ. ವೀರಯ್ಯ, ಹೊಸ ಭರಂಪುರ, ಹರಿಹರ.**

ಇವರು ಮಾಡುವ ವಿಜ್ಞಾಪನೆಗಳು.



ದಿನಾಂಕ 25-01-2021ನೇ ಸೋಮವಾರ ರಾತ್ರಿ 11-50ಕ್ಕೆ ನನ್ನ ಪೂಜ್ಯ ಅಣ್ಣನವರಾದ

**ಶ್ರೀ ಎಂ. ಸದಾಶಿವಯ್ಯ**

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಗುರು-ಲಿಂಗ-ಜಂಗಮ ಆರಾಧನೆ'ಯನ್ನು ದಿನಾಂಕ 02-02-2021ನೇ ಮಂಗಳವಾರ ಬೆಳಿಗ್ಗೆ 10-30 ಕ್ಕೆ ಹರಿಹರದ ಹೊಸಭರಂಪುರ 2ನೇ ಮೇನ್, 2ನೇ ಕ್ರಾಸ್‌ನಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲಾಗುವುದು ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಧರ್ಮಪತ್ನಿ ಶ್ರೀಮತಿ ನೀಲಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮುಕ್ತೇನಹಳ್ಳಿ ಮಠದ ವಂಶಸ್ಥರು ಹಾಗೂ ಬಂಧು-ಮಿತ್ರರು.


## ನಾಳೆ ಆಯ-ವ್ಯಯ ಸಭೆ

ದಾವಣಗೆರೆ, ಜ.30- ಮಹಾನಗರ ಪಾಲಿಕೆಯ ಆಯ - ವ್ಯಯಗಳನ್ನು ತಯಾರಿಸಲು ಫೆ.02 ರಂದು ಸಂಜೆ 4 ಕ್ಕೆ ಪಾಲಿಕೆಯ ಕೌನ್ಸಿಲ್ ಸಭಾಂಗಣದಲ್ಲಿ ಸಭೆಯನ್ನು ಆಯೋಜಿಸಲಾಗಿದೆ. ಆಯ-ವ್ಯಯ ಅಂದಾಜು ಪಟ್ಟಿಗೆ ಸಾರ್ವಜನಿಕರಿಂದ ಸಲಹೆಗಳನ್ನು ಪಡೆಯಲು ಉದ್ದೇಶಿಸಲಾಗಿದ್ದು, ಸಂಘ-ಸಂಸ್ಥೆಗಳು ಮತ್ತು ಸಾರ್ವಜನಿಕರು ಆಯ-ವ್ಯಯ ಅಂದಾಜು ಪಟ್ಟಿಗೆ ಸಲಹೆಗಳನ್ನು ನೀಡಬಹುದಾಗಿದೆ.


॥ ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ॥ ॥ ಶ್ರೀ ಬಸವೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ಜಿ॥, ತಾ॥, ಶಿರಮಗೊಂಡನಹಳ್ಳಿ ಗ್ರಾಮದ ವಾಸಿಗಳಾದ

**ಶ್ರೀ ಪಟೇಲ್ ಅಜ್ಜಪ್ಪ ಮತ್ತು ಸಹೋದರರು**

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 20.01.2021 ಬುಧವಾರ ಸಂಜೆ 6.20 ಕ್ಕೆ ನನ್ನ ತಮ್ಮ ದಿ॥ ಗೌಡ್ರು ರುದ್ರಪ್ಪನವರ ಧರ್ಮಪತ್ನಿ

**ಶ್ರೀಮತಿ ಯಶೋಧಮ್ಮನವರು**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

**ದಿನಾಂಕ 01.02.2021 ರ ಸೋಮವಾರ ಬೆಳಿಗ್ಗೆ 10.30ಕ್ಕೆ ಶಿರಮಗೊಂಡನಹಳ್ಳಿ ಗ್ರಾಮದ ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು:

**ಮೃತರ ತಂಗಿ ಶ್ರೀಮತಿ ಶಕುಂತಲಮ್ಮ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು ಮತ್ತು ಮೊಮ್ಮಕ್ಕಳು, ಗೌಡ್ರು ವಂಶಸ್ಥರು, ಅಜ್ಜಪ್ಪರ ವಂಶಸ್ಥರು, ಶಿರಮಗೊಂಡನಹಳ್ಳಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.**


# ಪರಿಪೂರ್ಣ ಜ್ಞಾನದಿಂದ ಮಾತ್ರ ರಂಗದ ವಿಮರ್ಶೆ ಸಾಧ್ಯ

## ಹಿರಿಯ ರಂಗ ತಜ್ಞರೂ, ಸಿನಿಮಾ ನಿರ್ದೇಶಕರೂ ಆದ ಬಿ. ಸುರೇಶ್ ಪ್ರತಿಪಾದನೆ



ದಾವಣಗೆರೆ, ಜ.31 - ಪರಿಪೂರ್ಣ ಜ್ಞಾನದಿಂದ ಮಾತ್ರ ಒಂದು ರಂಗದ ವಿಮರ್ಶೆ ಸಾಧ್ಯ ಎಂದು ಹಿರಿಯ ರಂಗ ತಜ್ಞರೂ, ಸಿನಿಮಾ ನಿರ್ದೇಶಕರೂ ಆದ ಬಿ. ಸುರೇಶ್ ಪ್ರತಿಪಾದಿಸಿದರು.

ಕರ್ನಾಟಕ ನಾಟಕ ಅಕಾಡೆಮಿ ವತಿಯಿಂದ ದಾವಣಗೆರೆ ವಿಶ್ವವಿದ್ಯಾನಿಲಯ, ಜಿಲ್ಲಾ ವರದಿಗಾರರ ಕೂಟ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ದಾವಣಗೆರೆ ವಿವಿ ಎಂಬಿಎ ಸಭಾಂಗಣದಲ್ಲಿ ನಿನ್ನೆ ಏರ್ಪಡಿಸಲಾಗಿದ್ದ ರಂಗ ವಿಮರ್ಶಾ ಕಮ್ಮಟದಲ್ಲಿ 'ಲಿಖಿತ ಪಠ್ಯ-ರಂಗ ಪಠ್ಯ ಮತ್ತು ವಿಮರ್ಶೆಯ ಹಾದಿ' ವಿಷಯ ಕುರಿತ ಗೋಷ್ಠಿಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ರಂಗ ವಿಮರ್ಶೆ ಮಾಡಬೇಕಾದರೆ ರಂಗಭೂಮಿ ಬಗ್ಗೆ ಸಂಪೂರ್ಣ ಅಧ್ಯಯನ ಅವಶ್ಯ. ಹೂ ಅರಳುವುದು, ಹೂವು ದುಂಬಿ ಆಕರ್ಷಿಸುವ ಅಂಶಗಳು ಒಂದು ರೀತಿಯ ವಿಮರ್ಶೆಯ ಅಂಶವೇ. ಈ ಎಲ್ಲಾ ಅಂಶಗಳನ್ನು ಪತ್ರಿಕೋದ್ಯಮ ಹಾಗೂ ಸಾಹಿತ್ಯದ ವಿದ್ಯಾರ್ಥಿಗಳು ನಿರಂತರ ಓದಿನಿಂದ ಜ್ಞಾನ ಪಡೆದುಕೊಂಡು ತಮ್ಮದೇ ಶೈಲಿಯಲ್ಲಿ ನಿರೂಪಿಸುವುದು ವಿಮರ್ಶೆ ಎನಿಸುತ್ತದೆ. ಒಮ್ಮೊಮ್ಮೆ ಭಿನ್ನಾಭಿಪ್ರಾಯ ಸೂಚಿಸುವುದು ಕೂಡ ವಿಮರ್ಶೆಯಾಗುತ್ತದೆ ಎಂದರು.

ಮಾನವ ಜೀವನದಲ್ಲಿ ವಿಮರ್ಶೆಗಳು ಒಂದು ರೀತಿಯ ಕಾಯಂ ಪ್ರಕ್ರಿಯೆಗಳಿದ್ದಂತೆ. ಮನುಷ್ಯ ದಿನೇ ದಿನೇ ಪ್ರಶ್ನೆಗೊಳಪಡುತ್ತಾನೆ. ಒಬ್ಬ ಮತ್ತೊಬ್ಬನನ್ನು ಪ್ರಶ್ನಿಸುವುದು, ಅನುಕರಿಸುವುದು, ತೆಗಳುವುದು ಒಂದು ರೀತಿಯ ವಿಮರ್ಶೆಯೇ ಆಗಿದೆ ಎಂದರು.

ಅನುಕರಣಾ ಮನೋಭಾವವನ್ನು ವಿಮರ್ಶಾ ಪ್ರವೃತಿಯಿಂದ ದೂರವಿಡ ಬೇಕು. ಆಗ ಯಾವುದೇ ಒಂದು ರಂಗದ ವಿಮರ್ಶೆ ಯಶಸ್ವಿಯಾಗಲು ಸಾಧ್ಯ. ಇಂದು ವಿಮರ್ಶಾ ರಂಗದಲ್ಲಿ ವಿಪುಲ ಉದ್ಯೋಗಾವಕಾಶಗಳಿದ್ದು, ವಿದ್ಯಾರ್ಥಿಗಳು ಉತ್ತಮ ಓದು, ತಿಳುವಳಿಕೆ, ಜ್ಞಾನ ಹೆಚ್ಚಿಸಿಕೊಳ್ಳುವುದರಿಂದ ಒಳ್ಳೆಯ ಸ್ಥಾನಮಾನ ಕಲ್ಪಿಸಿಕೊಳ್ಳಬಹುದು ಹಾಗೂ ವಿಮರ್ಶೆ ಕ್ಷೇತ್ರದಲ್ಲಿ ಪುಲಿಟ್ಜರ್ ಪ್ರಶಸ್ತಿಯನ್ನು ಕೊಡಲಾಗುತ್ತಿದ್ದು, ತಾವುಗಳು ಕೂಡ ಈ ಪ್ರಶಸ್ತಿ ಪಡೆಯಬಹುದಾಗಿದೆ ಎಂದರು.

ಪತ್ರಕರ್ತ ಬಿ.ಎನ್. ಮಲ್ಲೇಶ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ವಿಮರ್ಶೆಯು ಟೀಕೆಯೆಂಬಂತೆ ಬಿಂಬಿತವಾಗುತ್ತಿದೆ. ವಿಮರ್ಶೆ ಮಾಡಲು ವಿಷಯದ ಬಗ್ಗೆ ಸಾಮೂಲಾಗ್ರವಾಗಿ ತಿಳಿದುಕೊಂಡಿರಬೇಕು. ವಾಸ್ತವವನ್ನು ತಿಳಿದುಕೊಂಡು ವಿಮರ್ಶೆ ಮಾಡಬೇಕು ಎಂದರು.

ಸಾಹಿತಿ ಬಾ.ಮ.ಬಸವರಾಜಯ್ಯ, ಪತ್ರಕರ್ತರುಗಳಾದ ಯಳನಾಡು ಮಂಜುನಾಥ, ಮಂಜುನಾಥ ಗೌರಕ್ಕಳವರ್, ವಾರ್ತಾಧಿಕಾರಿ ಅಶೋಕ್‌ಕುಮಾರ್.ಡಿ, ದಾವಣಗೆರೆ ವಿವಿ ಸಿಂಡಿಕೇಟ್ ಸದಸ್ಯರಾದ ವಿಜಯಲಕ್ಷ್ಮಿ ಹಿರೇಮಠ, ನಾಟಕ ಅಕಾಡೆಮಿ ಸದಸ್ಯ ರವೀಂದ್ರ ಅರಳಗುಪ್ಪಿ ಹಾಗೂ ಇತರರು ಉಪಸ್ಥಿತರಿದ್ದರು.


## ಸಹಜ ಆಸೆಗಳನ್ನು ಬದಿಗಿಟ್ಟು ನಮ್ಮ ಕಾಯಕವನ್ನು ಸಾಧಿಸಲು ಪ್ರಯತ್ನಿಸಬೇಕು : ಪ್ರೊ.ಎಸ್.ವಿ. ಹಲಸೆ

ದಾವಣಗೆರೆ, ಜ.31 - ಮನುಷ್ಯನಿಗೆ ಆಸೆಗಳು ಸಹಜ. ಆಸೆಗಳನ್ನು ಬದಿಗಿಟ್ಟು ನಮ್ಮ ಕಾಯಕವನ್ನು ಸಾಧಿಸಲು ಪ್ರಯತ್ನಿಸಬೇಕು ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎಸ್.ವಿ. ಹಲಸೆ ಹೇಳಿದರು.

ದಾವಣಗೆರೆ ವಿವಿ ಎಂಬಿಎ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ರಂಗ ವಿಮರ್ಶಾ ಕಮ್ಮಟ ಉದ್ಘಾಟಿಸಿ ಅವರು ಮಾತನಾಡಿದರು. ಲಿಖಿತ ಪಠ್ಯ-ರಂಗ ಪಠ್ಯ ಮತ್ತು ವಿಮರ್ಶೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಸತತ ಪ್ರಯತ್ನ ಬಹುಮುಖ್ಯ. ವಿದ್ಯಾರ್ಥಿಗಳ ಕಾಯಕ ಅಧ್ಯಯನ ಮಾಡುವುದಾದರೆ, ಸಮರ್ಪಕವಾಗಿ ಪಾಠ ಪ್ರವಚನ ಮಾಡುವುದು ಶಿಕ್ಷಕರ ಕಾಯಕ ಮತ್ತು ಜವಾಬ್ದಾರಿ. ಯಾವುದೇ ಶಿಕ್ಷಕನಿಗೆ ನಾನು ಉತ್ತಮ ವಿದ್ಯಾರ್ಥಿಗಳನ್ನು ಹೊರ ತರುತ್ತೇನೆ ಎಂಬ ಆತ್ಮವಿಶ್ವಾಸವಿರಬೇಕು. ಆಗ ಮಾತ್ರ ನಮ್ಮ ದೇಶ ರಾಮರಾಜ್ಯವಾಗುತ್ತದೆ ಎಂದು ಹೇಳಿದರು.

ಎಲ್ಲಾ ವಿದ್ಯಾರ್ಥಿಗಳ ಬುದ್ದಿಮಟ್ಟ ಒಂದೇ ಆಗಿರುತ್ತದೆ. ಆದರೆ ಅಭ್ಯಾಸದಲ್ಲಿ ತೊಡಗಿಕೊಳ್ಳುವಿಕೆಯ ಸಮಯ ಹೆಚ್ಚಾದಂತೆ ಅವರ ಜ್ಞಾನ ಹೆಚ್ಚಾಗುತ್ತಾ ಹೋಗುತ್ತದೆ. ಜೊತೆಗೆ ನಮ್ಮ ಮತ್ತು ವಿದ್ಯಾರ್ಥಿಗಳ ಸಂಬಂಧ ಉತ್ತಮವಾಗಿದ್ದಲ್ಲಿ ಮಾತ್ರ ಒಳ್ಳೆಯ ಶಿಕ್ಷಣ ನಿಡಲು ಸಾಧ್ಯವಾಗುತ್ತದೆ ಎಂದ ಅವರು, ವಿದ್ಯಾರ್ಥಿಗಳು ಭಾಷೆಯನ್ನು ಪರಿಶುದ್ದವಾಗಿ ಕಲಿಯಬೇಕು ಎಂದು ಸಲಹೆ ನೀಡಿದರು.

## ರಾಜನಹಳ್ಳಿ : ವಾಲ್ಮೀಕಿ ಜಾತ್ರೆಯ ಮಹಾ ಮಂಟಪಕ್ಕೆ ಇಂದು ಹಂದರ ಕಂಬ ಪೂಜೆ



ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಫೆಬ್ರವರಿ 8 ಮತ್ತು 9 ರಂದು ಜರುಗಲಿರುವ 3ನೇ ವರ್ಷದ ವಾಲ್ಮೀಕಿ ಜಾತ್ರಾ ಮಹೋತ್ಸವದ ಮಹಾ ಮಂಟಪ ನಿರ್ಮಾಣಕ್ಕೆ ಇಂದು ಬೆಳಿಗ್ಗೆ 10.30 ಕ್ಕೆ ಹಂದರ ಕಂಬ ಪೂಜಾ ಕಾರ್ಯಕ್ರಮವನ್ನು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಾತ್ರಾ ಸಮಿತಿ ಸಂಚಾಲಕ ಹೊದಿಗೆರೆ ರಮೇಶ್ ತಿಳಿಸಿದರು.

ನಂತರ 11 ಗಂಟೆಗೆ ವಾಲ್ಮೀಕಿ ಜಾತ್ರೆಯ ಪೂರ್ವಭಾವಿ ಸಭೆಯನ್ನು ಜಿಲ್ಲಾಡಳಿತ ಹಾಗೂ ವಾಲ್ಮೀಕಿ ಗುರುಪೀಠದ ಸಹಯೋಗದಲ್ಲಿ ನಡೆಯಲಿದೆ. ಸತೀಶ್ ಜಾರಕಿಹೊಳಿ, ಎಸ್.ವಿ ರಾಮಚಂದ್ರ, ಎಸ್. ರಾಮಪ್ಪ ಮತ್ತು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ಹನುಮಂತರಾಯ, ಜಿ.ಪಂ ಸಿಇಓ ಪದ್ಮ ಬಸವಂತಪ್ಪ ಮತ್ತಿತರರು ಸಭೆಯಲ್ಲಿ ಭಾಗವಹಿಸಲಿದ್ದಾರೆ.

**ಪರಿಶೀಲನೆ :** ಮಾಜಿ ಶಾಸಕ ಬಿ.ಪಿ. ಹರೀಶ್ ಅವರು ಭಾನುವಾರ ಮಠಕ್ಕೆ ಭೇಟಿ ನೀಡಿ ಜಾತ್ರೆಯ ಸಿದ್ಧತೆಯನ್ನು ವೀಕ್ಷಿಸಿ, ಶ್ರೀಗಳ ಜೊತೆ ಚರ್ಚಿಸಿದರು.

## ಇಂದು ಶಿರಮಗೊಂಡನಹಳ್ಳಿಯ ಚೌಡೇಶ್ವರಿ ದೇವಿ ಜಾತ್ರಾ ಮಹೋತ್ಸವ

ದಾವಣಗೆರೆ ತಾಲ್ಲೂಕು ಶಿರಮಗೊಂಡನಹಳ್ಳಿ ಗ್ರಾಮದಲ್ಲಿ 10ನೇ ವರ್ಷದ ದೀಪಾರಾಧನೆ ಮತ್ತು ಶ್ರೀ ಚೌಡೇಶ್ವರಿ ದೇವಿಯ ಜಾತ್ರಾ ಮಹೋತ್ಸವವನ್ನು ಹಮ್ಮಿಕೊಳ್ಳಲಾಗಿದ್ದು, ಇಂದು (ಫೆ.1 ರಂದು) ರಾತ್ರಿ ಗ್ರಾಮದ ದೇವರುಗಳನ್ನು ಶ್ರೀ ಚೌಡೇಶ್ವರಿ ದೇವಸ್ಥಾನಕ್ಕೆ ಕರೆದೊಯ್ಯಲಾಗುವುದು ಮತ್ತು ಪುರಾಣ ಪ್ರವಚನ ನಡೆಯುವುದು.

ಫೆ. 2ರ ಮಂಗಳವಾರ ಪ್ರಾತಃಕಾಲ 5.30 ಕ್ಕೆ ದೇವರುಗಳ ಸಮ್ಮುಖದಲ್ಲಿ ಗಂಗಾಪೂಜೆ ಮತ್ತು ದೇವಿಗೆ ಅಭಿಷೇಕ ನಡೆಯಲಿದೆ ಹಾಗೂ ಪ್ರವಚನ ಮುಕ್ತಾಯ, ಮಂಗಳಾರತಿ ನಡೆಯಲಿದೆ. ಕಾರ್ಯಕ್ರಮದ ಅಂಗವಾಗಿ ಫೆ.2 ರ ಮಧ್ಯಾಹ್ನ 12.30ಕ್ಕೆ ಅನ್ನ ಸಂತರ್ಪಣೆ ನಡೆಯುವುದು ಎಂದು ಶ್ರೀ ತಪ್ಪಿಮರದ ಚೌಡೇಶ್ವರಿ ದೇವಿಯ ದೇವಸ್ಥಾನ ಜೀರ್ಣೋದ್ಧಾರ ಸಮಿತಿ ತಿಳಿಸಿದೆ.

## ಮಡಿವಾಳ ಮಾಚಿದೇವರ ಜಯಂತಿ ಇಂದು

ದಾವಣಗೆರೆ ವಿನೋಬ ನಗರ 1ನೇ ಮುಖ್ಯರಸ್ತೆ 17ನೇ ತಿರುವಿನಲ್ಲಿರುವ ಶ್ರೀ ಮಡಿವಾಳ ಮಾಚಿದೇವರ ದೇವಸ್ಥಾನದಲ್ಲಿ ಶ್ರೀ ಸ್ವಾಮಿಯ ಜಯಂತಿ ಮಹೋತ್ಸವ ಇಂದು ನಡೆಯಲಿದೆ. ಬೆಳಿಗ್ಗೆ 8.30ರಿಂದ ದೇವರಿಗೆ ವಿಶೇಷ ಪೂಜೆ, ಅಭಿಷೇಕ, ಇತರೆ ಪೂಜಾ ಕಾರ್ಯಕ್ರಮಗಳು, ಪ್ರಸಾದ ವಿನಿಯೋಗ ನಡೆಯಲಿವೆ.

ಮಾಚಿದೇವರ ಬಗ್ಗೆ ಪ್ರವಚನವನ್ನು ಸಹಾಯಕ ಪ್ರಾಧ್ಯಾಪಕರಾದ ಡಾ.ಅನಿತಾ ಹೆಚ್. ದೊಡ್ಡಗೌಡರ್ ಮಾಡಲಿದ್ದಾರೆ. ಪಿ.ಹೆಚ್.ಡಿ. ಪಡೆದಿರುವ ಗಣೇಶ್ ಪೂಜಾರಯ್ಯ ಅವರನ್ನು ಸನ್ಮಾನಿಸಲಾಗುವುದು ಎಂದು ಜಿಲ್ಲಾ ಮಡಿವಾಳ ಮಾಚೀದೇವ ಸಂಘದ ಅಧ್ಯಕ್ಷ ಎಂ.ನಾಗೇಂದ್ರಪ್ಪ ತಿಳಿಸಿದ್ದಾರೆ.

### ದಿನದ ಚುಟುಕು

ಆಡುವುದು ಬಲು ಸುಲಭ
ಅರಗಿಸುವುದು ಬಲು ಕಷ್ಟ
ಪರ ನಿಂದನೆಯಲ್ಲಿಹ ಪಾಪ
ಇಂದಲ್ಲ, ನಾಳೆ ತಟ್ಟುವ ಶಾಪ!

- ವೀಕೆಎಂ

## ಉಮಾಮಹೇಶ್ವರ ದೇವಸ್ಥಾನದಲ್ಲಿ ಇಂದು ಸಿದ್ದಲಿಂಗ ಶ್ರೀಗಳ ಪುಣ್ಯಸ್ಮರಣೆ

ದಾವಣಗೆರೆ ಪಿ.ಬಿ. ರಸ್ತೆಯಲ್ಲಿರುವ ಹೊಳೆಹೊನ್ನೂರು ತೋಟದ ಶ್ರೀ ಉಮಾಮಹೇಶ್ವರ ದೇವಸ್ಥಾನದಲ್ಲಿ ಉಜ್ಜಯಿನಿ ಜಗದ್ಗುರು ಲಿಂ. ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಪುಣ್ಯಸ್ಮರಣೆ ಅಂಗವಾಗಿ ಇಂದು ಬೆಳಿಗ್ಗೆ 6 ರಿಂದ ಹೋಮ, ಪೂಜೆ ನಡೆಯಲಿದೆ.

ಇಂದು ಬೆಳಿಗ್ಗೆ 10 ಗಂಟೆಗೆ ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮಿಗಳ ಸಾನಿಧ್ಯದಲ್ಲಿ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಲಿದೆ ಎಂದು ಶ್ರೀ ಉದಯಶಂಕರ ಶಾಸ್ತ್ರಿಗಳು ತಿಳಿಸಿದ್ದಾರೆ.

## ನಗರದಲ್ಲಿಂದು ಸಂಧ್ಯಾವಂದನೆ ಶಿಬಿರ

ಅಖಿಲ ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ (ಬೆಂಗಳೂರು) ಮತ್ತು ಅಖಿಲ ಕರ್ನಾಟಕ ಅರ್ಚಕರು ಮತ್ತು ಪುರೋಹಿತರ ಸಂಘದ ವತಿಯಿಂದ ತ್ರಿಮತಸ್ಥ ಬ್ರಾಹ್ಮಣ ಬಂಧುಗಳಿಗೆ ಸಂಧ್ಯಾವಂದನೆ ಮತ್ತು ನಿತ್ಯ ದೇವತಾರ್ಚನೆ ಶಿಬಿರವನ್ನು ಇಂದಿನಿಂದ ಫೆಬ್ರವರಿ 15 ರವರೆಗೆ ಪ್ರತಿದಿನ ಸಂಜೆ 5.30 ರಿಂದ 6.30 ರವರೆಗೆ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಕೂಡಲಿ ಶಂಕರ ಮಠದಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಪಾಲ್ಗೊಳ್ಳಲು ವಯಸ್ಸಿನ ಮಿತಿ ಇರುವುದಿಲ್ಲ ಎಂದು ಪುರೋಹಿತರ ಸಂಘದ ಅಧ್ಯಕ್ಷ ಪವನ್ ಕುಮಾರ್ ಭಟ್ (9886212889, 9611165426) ತಿಳಿಸಿದ್ದಾರೆ.

## ಮಾಳನಾಯಕನಹಳ್ಳಿಯಲ್ಲಿ ಇಂದು - ನಾಳೆ ಗ್ರಾಮದೇವತೆ ಜಾತ್ರೆ

ರಾಣೇಬೆನ್ನೂರು ತಾಲ್ಲೂಕಿನ ಮಾಳನಾಯಕನಹಳ್ಳಿ ಗ್ರಾಮದ ಗ್ರಾಮದೇವತೆ ಶ್ರೀ ದುರ್ಗಾಂಬಿಕಾದೇವಿ ಜಾತ್ರೆಯು ಇಂದು ಮತ್ತು ನಾಳೆ ನಡೆಯಲಿದೆ. ಇಂದು ರಾತ್ರಿ 8 ಗಂಟೆಗೆ ಡೊಳ್ಳು, ಬಾಜಾ, ಭಜನೆ, ಹಲಗೆ, ಕಹಳೆ, ವಾದ್ಯಗಳೊಂದಿಗೆ ಶ್ರೀ ದೇವಿಯ ಉತ್ಸವ ಗ್ರಾಮದ ಬೀದಿಗಳಲ್ಲಿ ಸಾಗುವುದು. ನಾಳೆ ಮಂಗಳವಾರ ಬೆಳಿಗ್ಗೆ 6 ಗಂಟೆಗೆ ದೇವಿಯು ಮಂದಿರಕ್ಕೆ ಪ್ರವೇಶ ಮಾಡುವಳು. 7 ಗಂಟೆಗೆ ದೇವಿಗೆ ಅಭಿಷೇಕಾಚರಣೆ ನಡೆಯುವವು. ಅಂದು ಮಧ್ಯಾಹ್ನ 3 ಗಂಟೆಗೆ ಗಂಡಾರತಿಯೊಂದಿಗೆ ದೇವಿಗೆ ಉಡಿ ತುಂಬುವ ಕಾರ್ಯಕ್ರಮ ಜರುಗುವುದು.

# ಮುಂಜಾಗ್ರತೆ ಲಸಿಕೆಯಿಂದ ಪ್ರಪಂಚದಿಂದ ಪೋಲಿಯೋ ದೂರ

## ಪೋಲಿಯೋ ಲಸಿಕೆ ಅಭಿಯಾನಕ್ಕೆ ಜಿ.ಪಂ.ಅಧ್ಯಕ್ಷೆ ಶಾಂತಕುಮಾರಿ ಚಾಲನೆ



ದಾವಣಗೆರೆ, ಜ.31- ಶಾಶ್ವತ ಅಂಗ ವೈಕಲ್ಯಕ್ಕೆ ದೂಡುವ ಪೋಲಿಯೋ ಮಹಾಮಾರಿ ಇಡೀ ಪ್ರಪಂಚದಿಂದಲೇ ದೂರವಾಗಬೇಕು. ಇದಕ್ಕೆ ಮುಂಜಾಗ್ರತೆಯಾಗಿ ಪೋಲಿಯೋ ಲಸಿಕೆ ಹಾಕಿಸಬೇಕೆಂದು ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಕೆ.ವಿ. ಶಾಂತಕುಮಾರಿ ತಿಳಿಸಿದರು.

ಅವರು, ಇಂದು ನಗರದ ಶ್ರೀರಾಮನಗರದ ಹೈಸ್ಕೂಲ್ ಮೈದಾನದಲ್ಲಿ ಜಿಲ್ಲಾಡಳಿತ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಏರ್ಪಡಿಸಲಾಗಿದ್ದ ಪೋಲಿಯೋ ಲಸಿಕೆ ಅಭಿಯಾನದಲ್ಲಿ ಶಿಶುಗಳಿಗೆ ಪೋಲಿಯೋ ಹನಿ ಹಾಕುವ ಮೂಲಕ ಲಸಿಕಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಮಾತನಾಡಿದರು.

ಭಾರತ ದೇಶದಲ್ಲಿ ಯಾವುದೇ ಪೋಲಿಯೋ ಪ್ರಕರಣಗಳು ಇಲ್ಲ ಎಂದು ಹೇಳಲಾಗುತ್ತದೆ. ಪಕ್ಕದ ರಾಷ್ಟ್ರ ಅಫ್ಘಾನಿಸ್ಥಾನದಲ್ಲಿ ಪೋಲಿಯೋ ಪ್ರಕರಣಗಳು ಕಂಡು ಬಂದಿರುವುದರಿಂದ ನಾವು ಎಚ್ಚರದಿಂದಿರಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪೋಲಿಯೋ ನಿರ್ಮೂಲನೆಗೆ ಶ್ರಮಿಸುತ್ತಿದವೆ ಎಂದರಲ್ಲದೇ, ಈ ಆಂದೋಲನದಲ್ಲಿ ಶ್ರಮಿಸುತ್ತಿರುವ ಎಲ್ಲಾ ಆರೋಗ್ಯ ಕ್ಷೇತ್ರದ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸಿದರು.

ಜಿಲ್ಲಾ ಪಂಚಾಯತ್ ಸಿಇಓ ಪದ್ಮ ಬಸವಂತಪ್ಪ ಮಾತನಾಡಿ, ಪೋಲಿಯೋ ಹನಿ ಬಗೆಗೆ ಅರಿವು, ಕಾಳಜಿ ತೋರುತ್ತಿದ್ದು, ಎಲ್ಲಾ ಪೋಷಕರು ತಮ್ಮ ಮಕ್ಕಳಿಗೆ ಲಸಿಕೆ ಹಾಕಿಸುವ ಜೊತೆಗೆ ತಮ್ಮ ನೆರೆ ಹೊರೆಯವರು, ಬಂಧುಗಳಿಗೂ ತಿಳಿಸುವ ಮೂಲಕ ಮಕ್ಕಳನ್ನು ಪೋಲಿಯೋದಿಂದ ದೂರವಾಗಿಸಲು ಮುಂದಾಗಬೇಕೆಂದರು.

ಕೋವಿಡ್ ಹಿನ್ನೆಲೆಯಲ್ಲಿ ಬಹಳ ಜಾಗ್ರತೆಯಿಂದ ಪೋಲಿಯೋ ಹನಿ ಹಾಕಲಾಗುತ್ತಿದ್ದು, ಇಂದು ಬೂತ್ ಗಳಲ್ಲಿ ಹಾಗೂ ಮೂರು ದಿನ ಮನೆ ಮನೆಗೆ ತೆರಳಿ ಪೋಲಿಯೋ ಹನಿ ಹಾಕಲಾಗುತ್ತದೆ. ಈ ಹಿಂದೆ ಪೋಲಿಯೋ ಲಸಿಕೆ ಹಾಕಿಸಿದ್ದರೂ ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ತಪ್ಪದೇ ಪೋಲಿಯೋ ಹನಿ ಹಾಕಿಸುವಂತೆ ಕಿವಿಮಾತು ಹೇಳಿದರು.

ಆರ್.ಸಿ.ಹೆಚ್ ಅಧಿಕಾರಿ ಡಾ. ಮೀನಾಕ್ಷಿ ಮಾತನಾಡಿ, ಜಿಲ್ಲೆಯಲ್ಲಿ 1,56,211 ಮಕ್ಕಳಿಗೆ ಪೋಲಿಯೋ ಹನಿ ಹಾಕಲಾಗುತ್ತಿದ್ದು ಶೇ.100 ರಷ್ಟು ಗುರಿ ಸಾಧಿಸಲು ಪ್ರಯತ್ನಿಸಲಾಗುವುದು. ಒಟ್ಟು 1121 ಬೂತ್ ಗಳಿದ್ದು, 1132 ತಂಡಗಳ 6 ಸಾವಿರ ಆರೋಗ್ಯ ಕಾರ್ಯಕರ್ತರು ಅಭಿಯಾನದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ನಗರ ಪಾಲಿಕೆ ಸದಸ್ಯ ನಾಗರಾಜು, ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಂದ, ಡಾ. ರೇಣುಕಾರಾಧ್ಯ, ಡಾ. ವೆಂಕಟೇಶ್, ಐಇಸಿ ಅಧಿಕಾರಿ ಸುರೇಶ್ ಬಾರ್ಕಿ, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರಿದ್ದರು.


**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**



ಹರಿಹರ ಸಿಟಿ ವಾಸಿ

**ಶಿವಕುಮಾರ ಮತ್ತು ಸಹೋದರರು**

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 24.01.2021 ಮತ್ತು 26.01.2021 ರಂದು ನಮ್ಮ ಪೂಜ್ಯ ತಂದೆ-ತಾಯಿಯರಾದ

**ಶ್ರೀ ಸೊಲ್ಲಾಪುರದ ಶಿವಲಿಂಗಪ್ಪ ಮತ್ತು ಶ್ರೀಮತಿ ಶಾಂತಮ್ಮ**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ


**ಕೈಲಾಸ ಸಮಾರಾಧನೆಯನ್ನು**

**ದಿನಾಂಕ 01.02.2021 ನೇ ಸೋಮವಾರ ಮಧ್ಯಾಹ್ನ 12 ಗಂಟೆಗೆ ಹರಿಹರದ ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು:


**ಮಕ್ಕಳಾದ : ಶಿವಕುಮಾರ್ ಎಸ್., ಜನತಾವಾಣಿ ಏಜೆಂಟರು ಗುರುರಾಜ್.ಎಸ್, ಚಂದ್ರಶೇಖರ್ ಎಸ್.**


### ಹೆಚ್. ವೀರಭದ್ರಪ್ಪ ನಿಧನ



ಚನ್ನಗಿರಿ ತಾಲ್ಲೂಕು ಚಿರಡೋಣಿ ಗ್ರಾಮದ ಹೆಚ್.ವೀರಭದ್ರಪ್ಪ (79) ಅವರು ದಿನಾಂಕ 29.01.2021ರ ಶುಕ್ರವಾರ ಮಧ್ಯಾಹ್ನ 3.10ಕ್ಕೆ ನಿಧನರಾಗಿದ್ದಾರೆ. ಪತ್ನಿ, ನಾಲ್ವರು ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 01.2.2021 ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ಚಿರಡೋಣಿ ಗ್ರಾಮದಲ್ಲಿ ನೆರವೇರಲಿದೆ.

### ಶಾಮನೂರು ಕೆ.ಎಂ. ಅರುಣ್ ನಿಧನ



ದಾವಣಗೆರೆ ಸಿಟಿ ಶಾಮನೂರು ವಾಸಿ ಹಳ್ಳಿಗೌಡ್ರು ರಾಮಚಂದ್ರಪ್ಪನವರ ಪುತ್ರಿ ಶ್ರೀಮತಿ ಗೀತಮ್ಮ ಮಹೇಶ್ವರಪ್ಪನವರ ಜೇಷ್ಠ ಪುತ್ರ ಹಾಗೂ ಭಾರತೀಯ ರೈತ ಒಕ್ಕೂಟದ ಜಿಲ್ಲಾಧ್ಯಕ್ಷರಾದ ಶಾಮನೂರು ಹೆಚ್. ಆರ್. ಲಿಂಗರಾಜ್ ಅವರ ಅಳಿಯ, ಮೆಕ್ಯಾನಿಕಲ್ ಇಂಜಿನಿಯರ್ ಕೆ.ಎಂ. ಅರುಣ್ (32) ಅವರು ದಿನಾಂಕ 31.1.2021ರ ಭಾನುವಾರ ಬೆಳಿಗ್ಗೆ 8.30ಕ್ಕೆ ನಿಧನರಾದರು. ತಾಯಿ, ಪತ್ನಿ, ಸಹೋದರ-ಸಹೋದರಿ, ಭಾವ, ಅಜ್ಜ, ಸೋದರ ಮಾವಂದಿರು, ಚಿಕ್ಕಪ್ಪಂದಿರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 1.2.2021ರ ಸೋಮವಾರ ಮಧ್ಯಾಹ್ನ 12 ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

## ಮಲೇಬೆನ್ನೂರಿನಲ್ಲಿ ಪಲ್ಸ್ ಪೋಲಿಯೋ



ಮಲೇಬೆನ್ನೂರು, ಜ.31- ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಪುರಸಭೆ ಅಧ್ಯಕ್ಷೆ ಶ್ರೀಮತಿ ನಾಹಿದ ಅಂಜುಂ ಸೈಯದ್ ಇಸ್ರಾರ್ ಅವರು ಮಗುವಿಗೆ ಲಸಿಕೆ ಹಾಕುವ ಮೂಲಕ ಚಾಲನೆ ನೀಡಿದರು.

ಪುರಸಭೆ ಉಪಾಧ್ಯಕ್ಷೆ ಅಂಜಿನಮ್ಮ ವಿಜಯಕುಮಾರ್, ಮುಖ್ಯಾಧಿಕಾರಿ ಧರಣೇಂದ್ರ ಕುಮಾರ್, ವೈದ್ಯಾಧಿಕಾರಿ ಡಾ. ಲಕ್ಷ್ಮೀದೇವಿ, ಪುರಸಭೆ ಸದಸ್ಯ ಎ. ಆರೀಫ್ ಅಲಿ, ಆರೋಗ್ಯ ಸಮಿತಿ ಸದಸ್ಯ ಪಿ. ನಾರಾಯಣಪ್ಪ ಮತ್ತಿತರರು ಈ ವೇಳೆ ಹಾಜರಿದ್ದರು.

# ಜನವರಿಯಲ್ಲಿ ದಾಖಲೆಯ 1.20 ಲಕ್ಷ ಕೋಟಿ ರೂ. ಜಿಎಸ್‌ಟಿ

ನವದೆಹಲಿ, ಜ. 31 – ಜನವರಿಯಲ್ಲಿ ಜಿ.ಎಸ್.ಟಿ ಸಂಗ್ರಹ ಸಾರ್ವಕಾಲಿಕ ದಾಖಲೆಯಾದ 1.20 ಲಕ್ಷ ಕೋಟಿ ರೂ.ಗಳಿಗೆ ತಲುಪಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಕಳೆದ ಐದು ತಿಂಗಳಿನಿಂದ ಜಿ.ಎಸ್.ಟಿ. ಸಂಗ್ರಹ ಏರುಮುಖವಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ 2021ರ ಜನವರಿಯಲ್ಲಿ ಜಿಎಸ್‌ಟಿ ಸಂಗ್ರಹ ಶೇ.8ರಷ್ಟು ಹೆಚ್ಚಾಗಿದೆ.

ಜನವರಿಯಲ್ಲಿ 1,19,847 ಕೋಟಿ ರೂ.ಗಳ ಜಿ.ಎಸ್.ಟಿ. ಸಂಗ್ರಹವಾಗಿದೆ. ಇದರಲ್ಲಿ ಸಿಜಿಎಸ್‌ಟಿ ಪಾಲು 21,923 ಕೋಟಿ ರೂ., ಎಸ್‌ಜಿಎಸ್‌ಟಿ ಪಾಲು 29,014 ಕೋಟಿ ರೂ., ಐಜಿಎಸ್‌ಟಿ 60,288 ಕೋಟಿ ರೂ. ಹಾಗೂ ಸೆಸ್ 8,622 ಕೋಟಿ ರೂ. ಆಗಿದೆ ಎಂದು ಸಚಿವಾಲಯದ ಹೇಳಿಕೆಯಲ್ಲಿ ತಿಳಿಸಲಾಗಿದೆ. ಇದು ಜನವರಿ 31ರ ಸಂಜೆ 6 ಗಂಟೆಯವರೆಗಿನ ಮಾಹಿತಿಯಾಗಿದೆ. ಜಿಎಸ್‌ಟಿ ಮಾಹಿತಿ ದೊರೆತಂತೆ ತೆರಿಗೆ ಸಂಗ್ರಹ ಇನ್ನಷ್ಟು ಹೆಚ್ಚಾಗಬಹುದು ಎಂದು ತಿಳಿಸಲಾಗಿದೆ.

2019-20ರ 12 ತಿಂಗಳ ಪೈಕಿ ಒಂಭತ್ತು ತಿಂಗಳಲ್ಲಿ ಜಿಎಸ್‌ಟಿ ಸಂಗ್ರಹ ಲಕ್ಷ ಕೋಟಿ ರೂ.ಗಳಿಗೂ ಹೆಚ್ಚಾಗಿತ್ತು. ಆದರೆ, ಪ್ರಸಕ್ತ ಹಣಕಾಸು ವರ್ಷದಲ್ಲಿ ಕೊರೊನಾ ಕಾರಣದಿಂದ ತೆರಿಗೆ ಸಂಗ್ರಹಕ್ಕೆ ಹಿನ್ನಡೆಯಾಗಿದೆ.

# ರೆಸಾರ್ಟ್‌ಗಳತ್ತ ಸದಸ್ಯರು, ಮಹಿಳೆಯರ ದರ್ಬಾರ್ ಶುರು

## ಹರಪನಹಳ್ಳಿ ತಾಲ್ಲೂಕು ಗ್ರಾಮ ಪಂಚಾಯ್ತಿ ಅಧ್ಯಕ್ಷ - ಉಪಾಧ್ಯಕ್ಷರ ಚುನಾವಣೆ

**ಕೆ. ಉಚ್ಚೆಂಗೆಪ್ಪ**

ಹರಪನಹಳ್ಳಿ, ಜ.31- ಗ್ರಾ.ಪಂ. ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳ ಮೀಸಲಾತಿ ಈಗಾಗಲೇ ಪ್ರಕಟವಾಗಿದ್ದು 37 ಗ್ರಾಮ ಪಂಚಾಯಿತಿಗಳಲ್ಲಿ ತಾಲ್ಲೂಕಿನ ಕಂಚಿಕೇರಿ, ಹಾರಕನಾಳು ಗ್ರಾಮ ಪಂಚಾಯಿತಿಗಳ ಅಧಿಕಾರ ಅವಧಿ ಪೂರ್ಣಗೊಂಡಿಲ್ಲ.

ಉಳಿದ 35 ಗ್ರಾಮ ಪಂಚಾಯಿತಿಗಳ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ ಫೆ.4 ರಿಂದ 9 ರವರೆಗೆ ನಿಗದಿಯಾಗುತ್ತಿದ್ದಂತೆ ಹಲವು ಗ್ರಾಮ ಪಂಚಾಯಿತಿಗಳಲ್ಲಿ ಅಧ್ಯಕ್ಷರಾಗಲು ಸದಸ್ಯರು ರೆಸಾರ್ಟ್‌ಗಳಲ್ಲಿ ವಾಸ್ತವ್ಯ ಹೂಡಿದ್ದಾರೆ.

ಗ್ರಾಮ ಪಂಚಾಯ್ತಿಗಳಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರಾಗಿ ಆಯ್ಕೆಯಾಗುವ ದಿನಗಳ ಕ್ಷಣಗಣನೆ ಶುರುವಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿನ ಗ್ರಾಮಸ್ಥರು ಯಾರು ಪಟ್ಟಕ್ಕೇರುತ್ತಾರೆ ಎನ್ನುವ ಕುತೂಹಲದಿಂದ ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ.

**ಕುಟುಂಬ ಹಸ್ತಕ್ಷೇಪಕ್ಕೆ ಬೀಳುತ್ತಾ ಬ್ರೇಕ್!** ಈಗಾಗಲೇ ಗ್ರಾಪಂ ಚುನಾವಣೆಗಳಲ್ಲಿ ಸದಸ್ಯರಾಗಿ ಯುವಕರು, ಮಹಿಳೆಯರು ಹೆಚ್ಚು ಆಯ್ಕೆಯಾಗಿರುವುದರಿಂದ ಅದರಲ್ಲೂ ಕೆಲವು ವಿದ್ಯಾವಂತರಿದ್ದರೆ, ಇನ್ನು ಕೆಲವರು ಅವಿದ್ಯಾವಂತರು ಇದ್ದು, ಇವರಿಗಿಂತ ಕುಟುಂಬದವರ ಹಸ್ತಕ್ಷೇಪ ನಡೆಯಬಹುದಾ ಎನ್ನುವ ಮಾತುಗಳು ಕೇಳಿಬಂದಿದ್ದು, ಪಂಚಾಯತ್ ರಾಜ್ ಅಧಿಕಾರಿಗಳು ಸದಸ್ಯರಿಗೆ ಗ್ರಾಪಂ ಆಡಳಿತ ನಡೆಸಲು ಸರಿಯಾದ ತರಬೇತಿ ಕೊಟ್ಟು ಕುಟುಂಬ ಹಸ್ತಕ್ಷೇಪಕ್ಕೆ ಬ್ರೇಕ್ ಹಾಕುತ್ತಾರೋ, ಇಲ್ಲವೋ ಗೊತ್ತಾಗಬೇಕಿದೆ.

**19 ಗ್ರಾಮ ಪಂಚಾಯಿತಿಗಳಲ್ಲಿ ಮಹಿಳೆಯರದ್ದೇ ದರ್ಬಾರ್:** ತಾಲ್ಲೂಕಿನಲ್ಲಿ ಈಗಾಗಲೇ 37 ಗ್ರಾಮ ಪಂಚಾಯಿತಿಗಳಲ್ಲಿ ಮೀಸಲಾತಿ ಘೋಷಣೆಯಾಗಿದ್ದು, ಇದರಲ್ಲಿ ಗ್ರಾಮ ಸ್ವರಾಜ್ ಕಲ್ಪನೆಯಲ್ಲಿ ಮಹಿಳೆಯರಿಗೆ ಹೆಚ್ಚಿನ ಮೀಸಲಾತಿ ನೀಡಿರುವ ಕಾರಣದಿಂದ ನಂದಿಬೇವೂರು, ಮಾಡಲಗೇರಿ, ಚಿಗಟೇರಿ, ಬೆಣ್ಣಿಹಳ್ಳಿ, ಚಿರಸ್ಥಹಳ್ಳಿ, ಹಿರೇಮೇಗಳಗೇರಿ, ಉಚ್ಚಂಗಿದುರ್ಗ, ಪುಣಭಗಟ್ಟ, ಶಿಂಗ್ರಿಹಳ್ಳಿ ಗ್ರಾಪಂಗಳಲ್ಲಿ ಸಾಮಾನ್ಯ ವರ್ಗದ ಮಹಿಳೆಯರು ಅಧ್ಯಕ್ಷರಾಗುವ ಸಂಭವವಿದೆ. ಹಾರಕನಾಳು, ಮತ್ತಿಹಳ್ಳಿ, ಕಡಬಗೇರಿ, ಕುಂಚೂರು, ನಿಟ್ಟೂರು, ಹೊಸಕೋಟೆ ಗ್ರಾಪಂಗಳಲ್ಲಿ ಪರಿಶಿಷ್ಟ ಜಾತಿ (ಎಸ್‌ಸಿ) ಮಹಿಳೆಯರು ಅಧ್ಯಕ್ಷರಾಗುವರು. ಇನ್ನೂ ಲಕ್ಷ್ಮೀಪುರ, ಅರಸಿಕೇರಿ, ಯಡಿಹಳ್ಳಿ, ಕಂಚಿಕೇರಿ ಗ್ರಾಮ ಪಂಚಾಯ್ತಿಗಳಲ್ಲಿ ಪರಿಶಿಷ್ಟ ಪಂಗಡ (ಎಸ್‌ಟಿ) ಮಹಿಳೆಯರು ಅಧ್ಯಕ್ಷರಾಗುವರು. ಸಾಸ್ವಿಹಳ್ಳಿ, ಅಡವಿಹಳ್ಳಿ, ನೀಲಗುಂದ, ತೌಡೂರು, ಕಡಬಗೇರಿ, ಹಾರಕನಾಳು, ಕೆ.ಕಲ್ಲಹಳ್ಳಿ, ತೆಲಿಗಿ, ಕಡತಿ ಗ್ರಾಪಂಗಳಲ್ಲಿ ಸಾಮಾನ್ಯ ವರ್ಗದ ಮಹಿಳೆಯರು, ಬಾಗಳಿ, ಮೈದೂರು, ಕೂಲಹಳ್ಳಿ, ತೊಗರಿಕಟ್ಟೆ, ಹಲುವಾಗಲು, ರಾಗಿಮಸಲವಾಡ ಪಂಚಾಯ್ತಿಗಳಲ್ಲಿ ಪರಿಶಿಷ್ಟ ಜಾತಿ ಮಹಿಳೆಯರು, ದುಗ್ಗಾವತ್ತಿ, ಚಟ್ನಿಹಳ್ಳಿ, ನಂದಿಬೇವೂರು, ಉಚ್ಚಂಗಿದುರ್ಗ ಪಂಚಾಯ್ತಿಗಳಲ್ಲಿ ಪರಿಶಿಷ್ಟ ಪಂಗಡ ಮಹಿಳೆಯರು ಸೇರಿ ಒಟ್ಟು 19 ಗ್ರಾಮ ಪಂಚಾಯಿತಿಗಳಲ್ಲಿ ಮಹಿಳೆಯರು ಉಪಾಧ್ಯಕ್ಷರಾಗುವರು. ಇನ್ನು ನಾಲ್ಕು ಗ್ರಾಮ ಪಂಚಾಯಿತಿಗಳಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಎರಡೂ ಸ್ಥಾನಗಳಲ್ಲಿ ಮಹಿಳೆಯರೇ ಆಡಳಿತ ನಡೆಸುವರು. ಇದೀಗ ಮಹಿಳೆಯರು ಅಧ್ಯಕ್ಷರಾಗಿ ಅಥವಾ ಉಪಾಧ್ಯಕ್ಷರಾಗಿ 19 ಗ್ರಾಮ ಪಂಚಾಯಿತಿಗಳಲ್ಲಿ ಆಡಳಿತ ಚುಕ್ಕಾಣಿ ಹಿಡಿಯಲಿದ್ದಾರೆ. ಇದರಿಂದ ಮಹಿಳೆಯರ ದರ್ಬಾರ್ ಶುರುವಾಗಲಿದೆ.

# ಖಾಲಿ ಜಾಗಕ್ಕೆ ಮುಗಿ ಬಿದ್ದ ಜನ




ದಾವಣಗೆರೆ, ಜ.31- ಪುಕ್ಕಟ್ಟೆಯಾಗಿ ಜಾಗ ಸಿಗುತ್ತೆಂಬ ಸುಳ್ಳು ಸುದ್ದಿಯನ್ನೇ ನಿಜವೆಂದು ನಂಬಿ ಜನರು ಖಾಲಿ ಜಾಗದಲ್ಲಿ ಸಿಕ್ಕಷ್ಟು ಜಾಗಕ್ಕೆ ಗೂಟ ನೆಟ್ಟು ಬೇಲಿ ಹಾಕಲು ಮುಗಿ ಬಿದ್ದಿದ್ದ ಘಟನೆ ಚನ್ನಗಿರಿ ತಾಲ್ಲೂಕಿನ ಚಿಕ್ಕೂಲಿಕೆರೆ ಗ್ರಾಮದ ಬಳಿ ನಡೆದಿದೆ.

ಚಿಕ್ಕೂಲಿಕೆರೆ ಸರ್ವೆ ನಂ 91, ಲಕ್ಷ್ಮಿಸಾಗರದ ಸರ್ವೆ ನಂ 15ರಲ್ಲಿ ಸುಮಾರು 150 ಎಕರೆ ಪ್ರದೇಶದಲ್ಲಿ ಜನರಿಗೆ ಉಚಿತವಾಗಿ ನಿವೇಶನ ಹಂಚಿಕೆ ಮಾಡಲಾಗುತ್ತದೆ ಎಂಬ ಸುಳ್ಳು ಸುದ್ದಿ ಹರಿದಾಡಿತ್ತು. ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಹಾಗೂ ಪುರಸಭೆ ಸದಸ್ಯರು ಮನೆ ಕಟ್ಟಲು ಹೇಳಿದ್ದಾರೆ ಎಂಬ ಸುದ್ದಿಗೆ ಜನ ಗುಂಪು ಗುಂಪಾಗಿ ಬಂದಿದ್ದರು. ಖಾಲಿ ಜಾಗಕ್ಕೆ ಜಾಗ ನಂದು ಅಂತ ಸಲಕಿ ಗುದ್ದಲಿ ತಂದು ಸಿಕ್ಕಷ್ಟು ಜಾಗಕ್ಕೆ ಗೂಟ ನೆಟ್ಟ ಬೇಲಿ ಹಾಕಲು ಮುಂದಾದರು.

ಹೀಗೆ ಬೇಲಿ ಹಾಕಿ ಮನೆ ಕಟ್ಟಲು ಮುಗಿ ಬಿದ್ದಿದ್ದ ಜನರನ್ನು ತಡೆದ ಅರಣ್ಯ ಇಲಾಖೆ ಸಿಬ್ಬಂದಿ ಇಲ್ಲಿ ಜಮೀನು ಹಂಚಿಕೆ ಮಾಡುತ್ತಿಲ್ಲ ಎಂದು ಮನವರಿಕೆ ಮಾಡಿ ಎಲ್ಲರನ್ನೂ ವಾಪಸ್ ಕಳುಹಿಸಿದ್ದಾರೆ. ಉಚಿತ ನಿವೇಶನ ಕೊಡುತ್ತಾರೆಂದು ಓಡೋಡಿ ಹೋಗಿದ್ದ ಜನರು ನಿರಾಶೆಗೊಂಡು ಮನೆಯತ್ತ ಹೆಜ್ಜೆ ಹಾಕಿದ್ದಾರೆ.

# ಚಿತ್ರಮಂದಿರಗಳ ಶೇ.100 ಸೀಟು ಭರ್ತಿಗೆ ಅನುಮತಿ

**(1ನೇ ಪುಟದಿಂದ)** ಚಿತ್ರಮಂದಿರಗಳು ಪೂರ್ಣ ಸಾಮರ್ಥ್ಯದಲ್ಲಿ ಕಾರ್ಯ ನಿರ್ವಹಿಸಬಹುದಾಗಿದೆ. ಡಿಜಿಟಲ್ ಟಿಕೆಟ್ ಬುಕಿಂಗ್ ಹಾಗೂ ಹಲವು ಹಂತದ ಚಿತ್ರ ಪ್ರಸಾರದ ಮೂಲಕ ಗುಂಪು ನಿರ್ವಹಣೆ ಮಾಡಬೇಕು ಎಂದು ತಿಳಿಸಲಾಗಿದೆ.

ಚಿತ್ರಮಂದಿರಗಳು ಹೆಚ್ಚು ಸಾಮರ್ಥ್ಯದೊಂದಿಗೆ ಕಾರ್ಯ ನಿರ್ಮಿಸಲು ಕೇಂದ್ರ ಗೃಹ ಸಚಿವಾಲಯ ನಿನ್ನೆ ಅನುಮತಿ ನೀಡಿತ್ತು.

ಸರ್ಕಾರದ ನಿರ್ಧಾರವನ್ನು ಪ್ರೊಡ್ಯೂಸರ್ಸ್ ಗಿಲ್ಡ್ ಆಫ್ ಇಂಡಿಯಾ ಹಾಗೂ ಮಲ್ಟಿಪ್ಲೆಕ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಸ್ವಾಗತಿಸಿವೆ. ಗ್ರಾಹಕರು ಚಿತ್ರಮಂದಿರಗಳ ಸ್ಟಾಲ್‌ಗಳಲ್ಲಿ ಆಹಾರವನ್ನು ಪಡೆಯಲು ಹಾಗೂ ಚಿತ್ರಮಂದಿರದ ಒಳಗೆ ತೆಗೆದುಕೊಂಡು ಹೋಗಲೂ ಸಹ ಅನುಮತಿ ನೀಡಲಾಗಿದೆ.

# ಲೈಂಗಿಕ ಪೀಡನೆ ವಿರೋಧಿಸಿದ ತಾಯಿ

**ಮಗುವನ್ನು ಬೆಂಕಿಗೆ ಎಸೆದ ದುಷ್ಕರ್ಮಿ**

ಮುಜಾಫರಪುರ, ಜ. 31 – ಲೈಂಗಿಕ ಪೀಡನೆಯನ್ನು ತಾಯಿ ವಿರೋಧಿಸಿದಾಗ ಆಕೆಯ ಮೂರು ತಿಂಗಳ ಮಗುವನ್ನು ದುಷ್ಕರ್ಮಿಯೋರ್ವ ಬೆಂಕಿಗೆ ಎಸೆದ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬಿಹಾರದ ಮುಜಾಫರಪುರ ಜಿಲ್ಲೆಯ ಬೋಚಾಹನ್ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ. ಮಗುವಿನ ಕಾಲಿಗೆ ತೀವ್ರ ಗಾಯಗಳಾಗಿದ್ದು, ಸದರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ತಾಯಿ ತನ್ನ ಮನೆಯ ಸಮೀಪದಲ್ಲಿ ಬೆಂಕಿ ಕಾಯಿಸಿಕೊಳ್ಳುತ್ತಿದ್ದಳು. ಆಗ ಅಲ್ಲಿಗೆ ಬಂದ ವ್ಯಕ್ತಿ ದುರ್ವರ್ತನೆ ತೋರಿದ. ಮಹಿಳೆ ಇದನ್ನು ವಿರೋಧಿಸಿದಾಗ ತಾಯಿಯ ಮಡಿಲಲ್ಲಿದ್ದ ಮಗುವನ್ನು ಬೆಂಕಿಗೆ ಎಸೆದಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ನೀಡಲು ತೆರಳಿದಾಗ ಪೊಲೀಸರು ಮೊದಲು ಎಫ್.ಐ.ಆರ್. ದಾಖಲಿಸಲಿಲ್ಲ. ಹಿರಿಯ ಎಸ್.ಪಿ. ಜಯಂತ್ ಕಾಂತ್ ಅವರಲ್ಲಿ ದೂರಿದ ನಂತರ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಮಹಿಳೆಯ ಪತಿ ಆರೋಪಿಸಿದ್ದಾನೆ.

# ನಗರದ ಬಾಪೂಜಿ ಹೈಟೆಕ್ ಕಾಲೇಜಿನಲ್ಲಿ ಇಂದಿನಿಂದ ಪ್ಲೇಸ್‌ಮೆಂಟ್ ಟ್ರೈನಿಂಗ್

ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈ ಟೆಕ್ ಎಜುಕೇಶನ್ ಕಾಲೇಜಿನಲ್ಲಿ ಇಂದಿನಿಂದ ಇದೇ ದಿನಾಂಕ 5 ರವರೆಗೆ ಬಿಸಿಎ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಪ್ಲೇಸ್‌ಮೆಂಟ್ ಟ್ರೈನಿಂಗ್ ಏರ್ಪಡಿಸಲಾಗಿದೆ. ಕಾರ್ಯಕ್ರಮದ ಉದ್ಘಾಟನೆ ಇಂದು ಬೆಳಿಗ್ಗೆ 9 ಕ್ಕೆ ನಡೆಯುವುದು. ಕಾರ್ಯಕ್ರಮದಲ್ಲಿ ಬಾಪೂಜಿ ಬಿ ಸ್ಕೂಲ್‌ನ ನಿರ್ದೇಶಕರಾದ ಡಾ. ಸ್ವಾಮಿ ತ್ರಿಭುವಾನಂದ ಉದ್ಘಾಟಿಸುವರು. ಪ್ರಾಂಶುಪಾಲ ಡಾ. ಬಿ. ವೀರಪ್ಪ ಅಧ್ಯಕ್ಷತೆ ವಹಿಸುವರು. ಸಂಪನ್ಮೂಲ ವ್ಯಕ್ತಿಗಳಾಗಿ ಕೊಯಮತ್ತೂರಿನ ಫೋಕಸ್ ಅಕ್ಯಾಡೆಮಿಯ ಎಂ. ಆಕಾಶ್, ಟಿ. ರಾಹುಲ್ ಆಗಮಿಸುವರು ಎಂದು ಕೆ.ಎಸ್. ಮುನವಳ್ಳಿ ಮಠ್ ತಿಳಿಸಿದ್ದಾರೆ.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ವಿದ್ಯಾನಗರ ಮುಖ್ಯರಸ್ತೆಯ ಆಂಜನೇಯ ದೇವಸ್ಥಾನ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10.30 ರಿಂದ 3 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

# ತ್ರಿವರ್ಣ ಧ್ವಜ ಅವಮಾನದಿಂದ ವ್ಯಥೆ

## ಕೃಷಿ ಆಧುನೀಕರಣ ಪ್ರಯತ್ನ ಮುಂದುವರೆಯಲಿದೆ ಎಂದ ಪ್ರಧಾನಿ

ನವದೆಹಲಿ, ಜ. 31 – ಗಣರಾಜ್ಯೋತ್ಸವದ ದಿನದಂದು ಕೆಂಪು ಕೋಟೆಯಲ್ಲಿ ತ್ರಿವರ್ಣ ಧ್ವಜಕ್ಕೆ ಆದ ಅವಮಾನದಿಂದ ದೇಶ ವ್ಯಥೆಗೊಂಡಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಮಾಸಿಕ ಮನ್ ಕಿ ಬಾತ್ ರೇಡಿಯೋ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದ ಅವರು, ದೇಶದ ಕೃಷಿ ಆಧುನೀಕರಣಕ್ಕೆ ಸರ್ಕಾರ ಬದ್ಧವಾಗಿದೆ ಹಾಗೂ ಈ ದಿಸೆಯಲ್ಲಿ ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದಿದ್ದಾರೆ.

ಕೃಷಿ ಆಧುನೀಕರಣದ ಪ್ರಯತ್ನಗಳು ಭವಿಷ್ಯದಲ್ಲೂ ಮುಂದುವರೆಯಲಿವೆ ಎಂದವರು ತಿಳಿಸಿದ್ದಾರೆ. ಪಂಜಾಬ್, ಹರಿಯಾಣ ಹಾಗೂ ದೆಹಲಿಯ ಗಡಿಯ ಉತ್ತರ ಪ್ರದೇಶದಲ್ಲಿ ರೈತರು ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ತೀವ್ರ ಹೋರಾಟ ನಡೆಸುತ್ತಿದ್ದಾರೆ.

ಈ ವರ್ಷ ಜನವರಿಯಲ್ಲಿ ಆದ ಹಲವಾರು ಬೆಳವಣಿಗೆಗಳನ್ನು ಪ್ರಸ್ತಾಪಿಸಿರುವ ಪ್ರಧಾನಿ, ಆಸ್ಟ್ರೇಲಿಯಾದಲ್ಲಿ ನಡೆದ ಟೆಸ್ಟ್ ಸರಣಿಯಲ್ಲಿ ಭಾರತ ಗೆಲುವು ಸಾಧಿಸಿರುವುದನ್ನೂ ಪ್ರಸ್ತಾಪಿಸಿದ್ದಾರೆ.

ಇದೇ ವೇಳೆ ಗಣರಾಜ್ಯೋತ್ಸವದ ದಿನದಂದು ನಡೆದ ಪ್ರತಿಭಟನಾ ನಿರತ ರೈತರ ಟ್ರ್ಯಾಕ್ಟರ್ ಪರೇಡ್ ಸಂದರ್ಭದಲ್ಲಿ ಹಿಂಸಾಚಾರ ನಡೆದಿದ್ದನ್ನು ಪ್ರಸ್ತಾಪಿಸಿದ್ದಾರೆ.

ಈ ಎಲ್ಲ ಘಟನೆಗಳ ನಡುವೆ ಜನವರಿ 26ರಂದು ದೆಹಲಿಯಲ್ಲಿ ತ್ರಿವರ್ಣ ಧ್ವಜಕ್ಕೆ ಆದ ಅವಮಾನದಿಂದ ದೇಶ ದುಃಖಿತವಾಗಿದೆ. ನಾವು ಮುಂಬರುವ ದಿನಗಳಲ್ಲಿ ಹೊಸ ಆಶಯ ಹಾಗೂ **(4ನೇ ಪುಟಕ್ಕೆ)**

# ಆಸ್ಪತ್ರೆಯಿಂದ ಬಿಡುಗಡೆಯಾದ ಶಶಿಕಲಾ



**ಎಐಎಡಿಎಂಕೆಗೆ ಸವಾಲೆಸೆಯುವ ಸೂಚನೆ**

ಬೆಂಗಳೂರು, ಜ. 31 – ಉಚ್ಚಾಟಿತ ಎಐಎಡಿಎಂಕೆ ನಾಯಕಿ ವಿ.ಕೆ.ಶಶಿಕಲಾ ಅವರು ಜೈಲು ಶಿಕ್ಷೆ ಪೂರೈಸಿದ ನಂತರ, ಕೊರೊನಾದಿಂದ ಚೇತರಿಸಿಕೊಂಡು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ.

ಎಐಎಡಿಎಂಕೆ ಧ್ವಜ ಇರುವ ಕಾರಿನಲ್ಲಿ ಪ್ರಯಾಣ ಮಾಡಿರುವ ಅವರು, ತಮಿಳುನಾಡಿನ ಆಡಳಿತಾರೂಢ ಪಕ್ಷದ ಜೊತೆ ಸಂಘರ್ಷಕ್ಕಿಳಿಯುವ ಸೂಚನೆ ನೀಡಿದ್ದಾರೆ. ಎಐಎಡಿಎಂಕೆಯಿಂದ ಉಚ್ಚಾಟನೆಗೊಂಡಿರುವ ಶಶಿಕಲಾ, ಪಕ್ಷದ ಧ್ವಜ ಬಳಸುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಲಾಗಿದೆ.

ಶಶಿಕಲ ಬಿಡುಗಡೆಯಾದರೂ ಅದು ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಎಐಎಡಿಎಂಕೆ ತಿಳಿಸಿದೆ. ಹಾಲಿ ಮುಖ್ಯಮಂತ್ರಿ ಕೆ. ಪಳನಿಸ್ವಾಮಿ ಅವರೇ ಮುಂದಿನ ಚುನಾವಣೆಯಲ್ಲಿ ಮುಖ್ಯ ಮಂತ್ರಿ ಅಭ್ಯರ್ಥಿ ಎಂದು ಪಕ್ಷ ಹೇಳಿದೆ. 2017ರಲ್ಲಿ ಎಐಎಡಿಎಂಕೆಯಿಂದ ಶಶಿಕಲ ಹಾಗೂ ಅವರ ಸಂಬಂಧಿ ಟಿ.ಟಿ.ವಿ. ದಿನಕರನ್ ಮತ್ತಿತರರನ್ನು ಉಚ್ಚಾಟಿಸಲಾಗಿತ್ತು. ಪಕ್ಷದ ಕಾರ್ಯಕರ್ತೆ ಸಹ ಅಲ್ಲದ ಶಶಿಕಲಾ ಎಐಎಡಿಎಂಕೆ ಧ್ವಜ ಬಳಸುವುದು ಕಾನೂನಿಗೆ ವಿರುದ್ಧವಾಗಿದೆ ಎಂದು ಸಚಿವ ಜಯಕುಮಾರ್ ಆಕ್ಷೇಪಿಸಿದ್ದಾರೆ.








ಮತ್ತಿಹಳ್ಳಿ ವೀರಣ್ಣ | ಎ.ಬಿ. ಚಂದ್ರಶೇಖರ್ | ಉಳವಯ್ಯ ಎಸ್.ಜಿ. | ಹೆಚ್.ಸಿ. ಲಿಂಗರಾಜ್ ವಾಲಿ | ರವಿಶಂಕರ್ ಪಲ್ಲಾಗಟ್ಟೆ | ಎಸ್.ಕೆ. ಪ್ರಶಾಂತ ಗುಪ್ತಾ | ಹೆಚ್.ವಿ. ರುದ್ರೇಶ್ | ಬಿ.ಜೆ. ಅಭಿಷೇಕ್ | ತಿಮ್ಮರಾಜ ಗುಪ್ತಾ ಎಸ್.ಕೆ. | ಬೆಳ್ಳೂಡಿ ಸದಾನಂದ | ಮಲ್ಲಿಕಾರ್ಜುನ ಬಾದಾಮಿ

# ದಾವಣಗೆರೆ ಕ್ಲಬ್ ಚುನಾವಣೆಯಲ್ಲಿ ಮತ್ತಿಹಳ್ಳಿ ವೀರಣ್ಣ ಗುಂಪಿಗೆ ಗೆಲುವು

**(1ನೇ ಪುಟದಿಂದ)** ಯು.ಜಿ. ಶಿವಕುಮಾರ್ ಅವರ ಗುಂಪಿನಿಂದ ಸ್ಪರ್ಧಿಸಿದವರಲ್ಲಿ ರವಿಶಂಕರ್ ಪಲ್ಲಾಗಟ್ಟೆ, ಬೆಳ್ಳೂಡಿ ಸದಾನಂದ, ಬಿ.ಜೆ. ಅಭಿಷೇಕ್ (ಬೇತೂರು), ಮಲ್ಲಿಕಾರ್ಜುನ ಬಾದಾಮಿ ಮತ್ತು ಎಸ್.ಕೆ. ತಿಮ್ಮರಾಜ ಗುಪ್ತಾ ಅವರುಗಳು ಆಯ್ಕೆಯಾಗಿದ್ದಾರೆ.

**ವಿವರ :** ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಇಬ್ಬರಲ್ಲಿ ಮತ್ತಿಹಳ್ಳಿ ವೀರಣ್ಣ 43 ಮತಗಳ ಅಂತರದಿಂದ ಜಯ ಗಳಿಸಿದರು. ವೀರಣ್ಣ 237 ಮತಗಳನ್ನು ಪಡೆದರೆ, ಅವರ ಪ್ರತಿಸ್ಪರ್ಧಿಯಾಗಿದ್ದ ಯು.ಜಿ. ಶಿವಕುಮಾರ್ 194 ಮತಗಳನ್ನು ಪಡೆದು ಪರಾಭವಗೊಂಡರು.

ಉಪಾಧ್ಯಕ್ಷತೆಯ ಒಂದು ಸ್ಥಾನಕ್ಕೆ ಸ್ಪರ್ಧಿಸಿದ್ದ ಮೂವರಲ್ಲಿ ಎ.ಬಿ. ಚಂದ್ರಶೇಖರ್ 22 ಮತಗಳ ಅಂತರದಿಂದ ಆಯ್ಕೆಯಾದರು. ಅವರು 217 ಮತಗಳನ್ನು ಗಳಿಸಿದರೆ, ಐ.ವಿ. ವೀರಣ್ಣ (ಐನಳ್ಳಿ) 195, ಎ. ಜಯಪ್ಪ 11 ಮತಗಳನ್ನು ಪಡೆದು ಪರಾಭವಗೊಂಡರು.

ಗೌರವ ಕಾರ್ಯದರ್ಶಿಯ ಒಂದು ಸ್ಥಾನಕ್ಕೆ ಸ್ಪರ್ಧೆ ಮಾಡಿದ್ದ ಇಬ್ಬರಲ್ಲಿ ರವಿಶಂಕರ್ ಪಲ್ಲಾಗಟ್ಟೆ 64 ಮತಗಳ ಅಂತರದಿಂದ ಜಯ ಗಳಿಸಿದರು. ಅವರು 247 ಮತಗಳನ್ನು ಗಳಿಸಿದರೆ, ಅವರ ಪ್ರತಿಸ್ಪರ್ಧಿ ಎಂ.ಕೆ. ರಾಜಶೇಖರ್ 183 ಮತಗಳನ್ನು ಪಡೆದು ಪರಾಭವಗೊಂಡರು.

ಗೌರವ ಸಹ ಕಾರ್ಯದರ್ಶಿಯ ಒಂದು ಸ್ಥಾನಕ್ಕೆ ಇಬ್ಬರು ಸ್ಪರ್ಧಿಸಿದ್ದರು. ಎಸ್.ಜಿ. ಉಳವಯ್ಯ 13 ಮತಗಳ ಅಂತರದಿಂದ ಆಯ್ಕೆಯಾದರು. ಅವರು 219 ಮತಗಳನ್ನು ಗಳಿಸಿದರೆ ಅವರ ಪ್ರತಿಸ್ಪರ್ಧಿ ಕೆ.ಬಿ. ನಾಗರಾಜ್ 206 ಮತಗಳನ್ನು ಪಡೆದು ಪರಾಭವಗೊಂಡರು.

ಖಜಾಂಚಿಯ ಒಂದು ಸ್ಥಾನಕ್ಕೆ ಸ್ಪರ್ಧಿಸಿದ್ದ ಇಬ್ಬರಲ್ಲಿ ಹೆಚ್.ಸಿ. ಲಿಂಗರಾಜ ವಾಲಿ 63 ಮತಗಳ ಅಂತರದಿಂದ ಜಯ ಗಳಿಸಿದರು. ಅವರು 243 ಮತಗಳನ್ನು ಗಳಿಸಿದರೆ ಅವರ ಪ್ರತಿಸ್ಪರ್ಧಿ ಪುಟ್ಟಪ್ಪ ಕಾಶಿಪುರ 180 ಮತಗಳನ್ನು ಪಡೆದು ಪರಾಭವಗೊಂಡರು.

ನಿರ್ದೇಶಕ ಸ್ಥಾನಗಳ ಸಂಖ್ಯೆ 6 ಇದ್ದು, 15 ಜನರು ಸ್ಪರ್ಧಿಸಿದ್ದರು. ಈ ಪೈಕಿ ಬೆಳ್ಳೂಡಿ ಸದಾನಂದ (270), ಹೆಚ್.ವಿ. ರುದ್ರೇಶ್ (230), ಬಿ.ಜೆ. ಅಭಿಷೇಕ್ ಬೇತೂರು (222), ಮಲ್ಲಿಕಾರ್ಜುನ ಬಾದಾಮಿ (209), ಎಸ್.ಕೆ. ತಿಮ್ಮರಾಜ ಗುಪ್ತಾ (199) ಹಾಗೂ ಎಸ್.ಕೆ. ಪ್ರಶಾಂತ್ ಗುಪ್ತಾ (198) ನಿರ್ದೇಶಕರುಗಳಾಗಿದ್ದಾರೆ.

ಉಳಿದಂತೆ ನಿರ್ದೇಶಕ ಸ್ಥಾನಗಳಿಗೆ ಸ್ಪರ್ಧಿಸಿದ್ದ ಬಿ.ಪಿ.ಪಟೇಲ್ (198), ಬಿ.ಜೆ. ನಾಗರಾಜ್ (190), ಆರ್.ಜಿ.ಶ್ರೀನಿವಾಸಮೂರ್ತಿ (172), ಬಿ.ವಿ. ಶಿವಯೋಗಿ ಬೂಸ್ನೂರು (156), ಎ.ಎನ್. ಕೊಟ್ರೇಶ್ (155), ಜಯರಾಜ್ ಎಸ್. ಕಶೆಟ್ಟರ್ (121), ಪ್ರಕಾಶ್ ವಿ. ರಾಯ್ಕರ್ (38), ಎನ್.ಜೆ. ಚನ್ನಬಸವನಗೌಡ (33), ಎನ್. ಸೋಮಶೇಖರ್ (16) ಪರಾಭವಗೊಂಡಿದ್ದಾರೆ.

**ವಿಜೇತರ ಮತ ಗಳಿಕೆ ವಿವರ :** ಚುನಾವಣೆಯಲ್ಲಿ ಆಯ್ಕೆಯಾದವರಲ್ಲಿ ಬೆಳ್ಳೂಡಿ ಸದಾನಂದ ಅತ್ಯಧಿಕ 270 ಮತಗಳನ್ನು ಪಡೆಯುವುದರ ಮೂಲಕ ಮತ ಗಳಿಕೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ರವಿಶಂಕರ್ ಪಲ್ಲಾಗಟ್ಟೆ 247 ಮತಗಳನ್ನು ಪಡೆದು ದ್ವಿತೀಯ ಸ್ಥಾನದಲ್ಲಿದ್ದರೆ, ಹೆಚ್.ಸಿ. ಲಿಂಗರಾಜ ವಾಲಿ 243 ಮತಗಳನ್ನು ಗಳಿಸಿ ತೃತೀಯ ಸ್ಥಾನದಲ್ಲಿದ್ದಾರೆ.

ನಂತರದ ಸ್ಥಾನಗಳನ್ನು ಮತ್ತಿಹಳ್ಳಿ ವೀರಣ್ಣ (237), ಹೆಚ್.ವಿ. ರುದ್ರೇಶ್ (230), ಬಿ.ಜಿ. ಅಭಿಷೇಕ್ (222), ಎಸ್.ಜಿ. ಉಳವಯ್ಯ (219), ಎ.ಬಿ. ಚಂದ್ರಶೇಖರ್ (217), ಮಲ್ಲಿಕಾರ್ಜುನ ಬಾದಾಮಿ (209), ಎಸ್.ಕೆ. ತಿಮ್ಮರಾಜ ಗುಪ್ತಾ (199), ಎಸ್.ಕೆ. ಪ್ರಶಾಂತ್ ಗುಪ್ತಾ (198) ಪಡೆದಿದ್ದಾರೆ.

ಎಸ್.ಕೆ. ಪ್ರಶಾಂತ್ ಗುಪ್ತಾ ಮತ್ತು ಬಿ.ಪಿ. ಪಟೇಲ್ ಇಬ್ಬರೂ 198 ಮತಗಳನ್ನು ಪಡೆದು ಸಮವಾಗಿದ್ದರು. ಈ ಸಂದರ್ಭದಲ್ಲಿ ನಡೆಸಿದ ಲಾಟರಿಯಲ್ಲಿ ಎಸ್.ಕೆ. ಪ್ರಶಾಂತ್ ಗುಪ್ತಾ ಅವರ ಪರ ಅದೃಷ್ಟ ಒಲಿಯಿತು.

**ಪುನರಾಯ್ಕೆ :** ದಾವಣಗೆರೆ ಕ್ಲಬ್ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಮತ್ತಿಹಳ್ಳಿ ವೀರಣ್ಣ ಅವರು ಈ ಹಿಂದೆ ಹತ್ತು ವರ್ಷಗಳ ಕಾಲ ಕ್ಲಬ್ಬಿನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಕಳೆದ ಅವಧಿಯಲ್ಲಿ ಪದಾಧಿಕಾರಿಗಳಾಗಿದ್ದ ಹೆಚ್.ಸಿ. ಲಿಂಗರಾಜ್ ವಾಲಿ, ಎಸ್.ಕೆ. ಪ್ರಶಾಂತ ಗುಪ್ತಾ, ಎ.ಬಿ. ಚಂದ್ರಶೇಖರ್, ಎಸ್.ಜಿ. ಉಳುವಯ್ಯ ಅವರುಗಳು ಮತ್ತೊಂದು ಅವಧಿಗೆ ಪುನರಾಯ್ಕೆಯಾಗಿದ್ದಾರೆ.

ಎಸ್.ಎಂ. ವೀರಪ್ಪ ಚುನಾವಣಾಧಿಕಾರಿಯಾಗಿದ್ದರು.

## ನ್ಯಾಯಾಲಯದ ಅನುಮತಿ ಪಡೆದು ಮತದಾನ

**ಮತದಾನದ ಮಹತ್ವ**



ದಾವಣಗೆರೆ ಕ್ಲಬ್ ಚುನಾವಣೆಯಲ್ಲಿ ದಾವಣಗೆರೆ - ಹರಿಹರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್ ಅವರು ನ್ಯಾಯಾಲಯದ ಅನುಮತಿ ಪಡೆದು ಮತದಾನ ಮಾಡಿದ್ದಾರೆ.

ದಾವಣಗೆರೆ ಕ್ಲಬ್ ಚುನಾವಣೆ ಘೋಷಣೆಯಾದ ಸಂದರ್ಭದಲ್ಲಿ ಪ್ರಕಟಿಸಲಾಗಿದ್ದ ಮತದಾರರ ಪಟ್ಟಿ ಯಲ್ಲಿ ತಮ್ಮ ಹೆಸರು ಇಲ್ಲದಿರುವ ಬಗ್ಗೆ ಮುರುಗೇಶ್ ಆತಂಕಗೊಂಡರು. ಇದಕ್ಕೆ ಕಾರಣವೇನು ಎಂದು ಮಾಡಿದ ಪ್ರಶ್ನೆಗೆ, 'ನನಗೆ ಕಾರ್ಯದರ್ಶಿಯವರು ಕೊಟ್ಟಿರುವ ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರು ಇರುವುದಿಲ್ಲ. ಕಾರಣ, ನಿಮಗೆ ಮತದಾನದ ಹಕ್ಕು ಕೊಡಲಾಗುವುದಿಲ್ಲ' ಎಂದು ಚುನಾವಣಾಧಿಕಾರಿಗಳು ಲಿಖಿತ ಮೂಲಕ ಮುರುಗೇಶ್ ಅವರಿಗೆ ಸ್ಪಷ್ಟಪಡಿಸಿದ್ದರು.

ಈ ಹಿನ್ನೆಲೆಯಲ್ಲಿ ತಮಗಾಗಿರುವ ಅನ್ಯಾಯವನ್ನು ಸರಿಪಡಿಸುವಂತೆ ಮತದಾನದ ಹಕ್ಕೊತ್ತಾಯಿಸಿ ಮುರುಗೇಶ್ ಅವರು ನ್ಯಾಯಾಲಯದ ಮೊರೆ ಹೋದರು. ಮಧ್ಯಂತರ ಅರ್ಜಿಯನ್ನು ಕೈಗೆತ್ತಿಕೊಂಡ ನಗರದ 3ನೇ ಹಿರಿಯ ಸಿವಿಲ್ ನ್ಯಾಯಾಧೀಶರಾದ ಪ್ರವೀಣ್ ನಾಯಕ್ ಅವರು, ಮುರುಗೇಶ್ ಅವರಿಗೆ ಮತ ಚಲಾಯಿಸಲು ಅನುಮತಿ ನೀಡುವಂತೆ ಚುನಾವಣಾಧಿ ಕಾರಿಗಳಿಗೆ ತುರ್ತು ನಿರ್ದೇಶನ ನೀಡಿದರು.

ಹಿರಿಯ ನ್ಯಾಯವಾದಿಗಳಾದ ಜಗದೀಶ್ ಹಿರೇಮಠ ಮತ್ತು ಆಶ್ವೀಜ್ ಹಿರೇಮಠ ಅವರುಗಳು ಅರ್ಜಿದಾರ ಎನ್.ಎ. ಮುರುಗೇಶ್ ಅವರ ಪರ ವಕಾಲತ್ತು ವಹಿಸಿದ್ದರು.

ನ್ಯಾಯಾಲಯದ ನಿರ್ದೇಶನದ ಮೇರೆಗೆ ಮುರುಗೇಶ್ ಅವರು ಮತದಾನ ಮಾಡುವುದರ ಮೂಲಕ ಮತದಾನದ ಬೆಲೆ ಮತ್ತು ಪಾವಿತ್ರತೆಯನ್ನು ಎತ್ತಿ ಹಿಡಿದರು.

ಏತನ್ಮಧ್ಯೆ, ಚುನಾವಣೆ ನಂತರ ಮತಗಳ ಎಣಿಕೆಯಲ್ಲಿ ಎಸ್.ಕೆ. ಪ್ರಶಾಂತ್ ಗುಪ್ತಾ ಮತ್ತು ಬಿ.ಪಿ. ಪಟೇಲ್ ಇಬ್ಬರೂ 198 ಮತಗಳನ್ನು ಪಡೆದು ಸಮವಾಗಿದ್ದರು. ಲಾಟರಿಯಲ್ಲಿ ಪ್ರಶಾಂತ್ ಗುಪ್ತಾ ಅವರಿಗೆ ಅದೃಷ್ಟ ಒಲಿಯಿತು. ಇದರಿಂದಾಗಿ ಚುನಾವಣೆಯಲ್ಲಿ ಒಂದು ಮತವೂ ಅತೀ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದು ಇಲ್ಲಿ ಗಮನಾರ್ಹ.

# ಶಿವಾಜಿ ಮೂಲವೇ ಕರ್ನಾಟಕ

**ಕುರ್ಚಿಗಾಗಿ ಠಾಕ್ರೆಯಿಂದ ಗಡಿ ವಿವಾದ: ಕಾರಜೋಳ ತರಾಟೆ**

**(1ನೇ ಪುಟದಿಂದ)** ಕಾರಜೋಳ, ಮಹಾರಾಷ್ಟ್ರದಲ್ಲಿ ಉದ್ಧವ್ ಠಾಕ್ರೆ ನೇತೃತ್ವ ದಲ್ಲಿರುವುದು ಸಮ್ಮಿಶ್ರ ಸರ್ಕಾರ. ಕಾಂಗ್ರೆಸ್ ಪಕ್ಷದವರು ಯಾವಾಗ ಕಿತ್ತು ಹಾಕುತ್ತಾರೋ ಎಂಬ ಭಯ ಉದ್ಧವ್ ಠಾಕ್ರೆಗಿದೆ. ಹೀಗಾಗಿ ತನ್ನ ಕುರ್ಚಿ ಉಳಿಸಿ ಕೊಳ್ಳಲು ಜನರ ಗಮನ ಬೇರೆಡೆಗೆ ಸೆಳೆಯುತ್ತಿದ್ದಾರೆ ಎಂದು ಹೇಳಿದ್ದಾರೆ.

ಉದ್ಧವ್ ಠಾಕ್ರೆ ಇತಿಹಾಸ ಓದಿಲ್ಲ. ಛತ್ರಪತಿ ಶಿವಾಜಿ ಮಹಾರಾಜರ ಮೂಲವೇ ಕನ್ನಡವಾಗಿದ್ದು, ಶಿವಾಜಿ ಮಹಾರಾಜರ ಮೂಲಪುರುಷ ಬೆಳ್ಳಿ ಯಪ್ಪ ಅವರು ಗದಗ ಜಿಲ್ಲೆಯ ಸೊರಟೂರಿನವರು. ಕರ್ನಾಟಕದಲ್ಲಿ ಬರ ಬಿದ್ದ ಸಂದರ್ಭದಲ್ಲಿ ಮಹಾರಾಷ್ಟ್ರಕ್ಕೆ ಬೆಳ್ಳಿಯಪ್ಪ ಗುಳೇ ಹೋಗ್ತಾರೆ. ಹೀಗೆ ಗುಳೇ ಹೋದ ಬೆಳ್ಳಿಯಪ್ಪ ಮಹಾರಾಷ್ಟ್ರಕ್ಕೆ ಹೋಗಿ ನೆಲೆಸುತ್ತಾರೆ.

ಅವರ ನಾಲ್ಕನೇ ತಲೆಮಾರಿಗೆ ಛತ್ರಪತಿ ಶಿವಾಜಿ ಮಹಾರಾಜರು ಬರುತ್ತಾರೆ. ಛತ್ರಪತಿ ಶಿವಾಜಿ ಮಹಾರಾಜರ ಮೂಲವೇ ಕನ್ನಡದ ನೆಲ. ಇದನ್ನು ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧ ವ್ ಠಾಕ್ರೆ ಅರ್ಥ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಕರ್ನಾಟಕದಲ್ಲಿ ಮರಾಠಿಗರು-ಕನ್ನಡಿಗರು ಸಹೋದರರಂತೆ ಇದ್ದೇವೆ. ಇಲ್ಲಿ ಭಾಷಾ ಸಮಸ್ಯೆ ಇಲ್ಲ. ಠಾಕ್ರೆ ಕುರ್ಚಿಗಾಗಿ ಕುಲಗೆಡಿಸುವ ಕೆಲಸ ಮಾಡಬಾರದು ಎಂದು ಹೇಳಿದರು.

# ಪ್ರತ್ಯೇಕ ಕೃಷಿ ಬಜೆಟ್ ಇಲ್ಲ

**(1ನೇ ಪುಟದಿಂದ)** ಸರ್ಕಾರ ಡಬಲ್ ಇಂಜಿನ್ ಇದ್ದಂತೆ ಎಂದು ಅಮಿತ್ ಶಾ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜ್ಯಕ್ಕೆ ಒಳ್ಳೆಯ ಕೃಷಿ ಬಜೆಟ್ ನೀಡುತ್ತಾರೆ ಎನ್ನುವ ನಿರೀಕ್ಷೆ ಇದೆ. ಬಜೆಟ್‌ನಲ್ಲಿ ಕೃಷಿ ವಲಯಕ್ಕೆ ಒತ್ತು ನೀಡುವ ನಿರೀಕ್ಷೆ ಇದೆ. ಈಗಾಗಲೇ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಕೃಷಿ ಕ್ಷೇತ್ರಕ್ಕೆ ಏನೇನು ಬೇಡಿಕೆ ಇದೆ ಎಂದು ನಾವು ನೀಡಿದ್ದೇವೆ ಎಂದು ಹೇಳಿದರು.

ಯುಗಾದಿ ವೇಳೆಗೆ ರಾಜ್ಯದಲ್ಲಿ ಸಿಎಂ ಬದಲಾವಣೆಯಾಗುತ್ತಾರೆ ಎಂದು ಶಾಸಕ ಬಸನಗೌಡ ಯತ್ನಾಳ್ ಹೇಳಿಕೆ ಕುರಿತು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಸಚಿ ವರು, ಯತ್ನಾಳ್ ಮಾತಿಗೆ ಬೆಲೆ ಕೊಡುವ ಅವಶ್ಯಕತೆ ಇಲ್ಲ. ಅವರು ತೋಳ ಬಂತು ತೋಳ ಎನ್ನುವ ಹಾಗೇ ಮಾತನಾಡು ತ್ತಾರೆ. ಒಂದೊಂದೆ ಹೇಳುತ್ತಾ ಹೋಗುತ್ತಾರೆ. ನಾಳೆ ಬಾ ಅನ್ನೋ ಬೋರ್ಡ್ ಹಾಕೋ ಹಾಗೇ ಯತ್ನಾಳ್ ಮಾತು ಕೂಡ ಎಂದು ವ್ಯಂಗ್ಯವಾಡಿದರು. ಕೇಂದ್ರ ನಾಯಕ ಅಮಿತ್ ಶಾ ಈಗಾಗಲೇ ಮುಖ್ಯಮಂತ್ರಿಗಳ ವಿಚಾರದಲ್ಲಿ ಮುಂದಿನ ಎರಡೂವರೆ ವರ್ಷ ಯಾವುದೇ ಬದಲಾವಣೆ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಹಾಗಾಗಿ ಅದರ ಬಗ್ಗೆ ಚಿಂತೆ ಮಾಡುವ ಅವಶ್ಯಕತೆ ಇಲ್ಲ ಎಂದರು.

**ಒಳ್ಳೆಯ ಚಿತ್ರವಿದ್ದರೆ ನೋಡೇ ನೋಡ್ತಾರೆ:** ಒಳ್ಳೆಯ ಚಿತ್ರ ಇದ್ದರೆ ನೋಡೇ ನೋಡ್ತಾರೆ ಎಂದು ರಾಬರ್ಟ್ ಚಿತ್ರ ಬಿಡುಗಡೆಯ ಗೊಂದಲಕ್ಕೆ ಹೇಳಿಕೆ ನೀಡಿದರು. ರಾಬರ್ಟ್ ಚಿತ್ರ ಬಿಡುಗಡೆ ಇದ್ದಾಗ ಆಂಧ್ರದಲ್ಲಿ ದೊಡ್ಡ ನಟರ ಚಿತ್ರ ಬಿಡುಗಡೆ ಇತ್ತು ಎಂದು ಚಿತ್ರಮಂದಿರ ನೀಡಿಲ್ಲ ಎನ್ನಲಾಗುತ್ತಿದೆ. ಈಗಾಗಲೇ ಫಿಲ್ಮ್ ಛೇಂಬರ್ ಗೆ ದೂರು ಸಹ ನೀಡಿದ್ದಾರೆ ಬಗೆಹರಿಸುತ್ತಾರೆ ಎಂದರು.

# ಪೋಲಿಯೋ ಲಸಿಕೆಗೆ ಚಾಲನೆ

**(1ನೇ ಪುಟದಿಂದ)** ದೊಂದಿಗೆ ಕೈ ಜೋಡಿಸಬೇಕು ಎಂದು ಪೋಷಕರಿಗೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯರಾದ ಜಿ.ಎಸ್. ಮಂಜುನಾಥ್ ಗಡಿಗುಡಾಳ್, ವಿನಾಯಕ, ಉಮೇಶ್ ಮತ್ತಿತರರು ಹಾಜರಿದ್ದರು.

# ಆರ್ಥಿಕತೆಗೆ ಲಸಿಕೆ ನಿರೀಕ್ಷೆ

**(1ನೇ ಪುಟದಿಂದ)** ಆರ್ಥಿಕ ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ. ಭಾರತ ವಿಶ್ವದಲ್ಲೇ ವೇಗವಾಗಿ ಬೆಳೆಯುವ ಆರ್ಥಿಕ ವ್ಯವಸ್ಥೆಯಾಗಲು ಸ್ಪಷ್ಟ ಮಾರ್ಗ ಸೂಚಿ ಬೇಕೆಂಬ ನಿರೀಕ್ಷೆ ಇದೆ.


2019ರಲ್ಲಿ ಸೀತಾರಾಮನ್ ಮೊದಲ ಬಜೆಟ್ ಮಂಡಿಸಿದ ನಂತರ ಸೆಪ್ಟೆಂಬರ್‌ನಲ್ಲಿ ಕಾರ್ಪೊರೇಟ್ ತೆರಿಗೆಯನ್ನು ಕಡಿತಗೊಳಿಸಿದ್ದರು. ನಂತರದಲ್ಲಿ ಹಲವಾರು ಪ್ರಮುಖ ಕ್ರಮಗಳನ್ನು ಕೈಗೊಳ್ಳಲಾಗಿತ್ತು. 2020ರಲ್ಲೂ ಇದೇ ಪ್ರಕ್ರಿಯೆ ಮುಂದುವರೆದು ಮಿನಿ ಬಜೆಟ್‌ಗಳ ಸರಮಾಲೆಯೇ ಆಗಿತ್ತು. ಕೊರೊನಾ ಹೊಡೆತದಿಂದಾಗಿ 2020-21ರಲ್ಲಿ ಆರ್ಥಿಕ ಬೆಳವಣಿಗೆ ದರ ಶೇ.7-8ರಷ್ಟು ಕುಸಿಯಲಿದೆ ಎಂದು ಆರ್ಥಿಕ ಪರಿಣಿತರು ಹೇಳುತ್ತಿದ್ದಾರೆ. ಇದು ಅಭಿವೃದ್ಧಿಶೀಲ ದೇಶಗಳಲ್ಲೇ ಅತಿ ಕಳಪೆ ಸಾಧನೆಗಳಲ್ಲಿ ಒಂದಾಗಲಿದೆ.

ಆರ್ಥಿಕತೆಯನ್ನು ಈ ಕಠಿಣ ದಾರಿಯಿಂದ ಹೊರಗೆ ತರುವಲ್ಲಿ ಸರ್ಕಾರ ಮಹತ್ವದ ಪಾತ್ರ ವಹಿಸಬೇಕಿದೆ. ಕೊರೊನಾ ಸೋಂಕು ಇಳಿಮುಖವಾಗುತ್ತಿರುವಂತೆಯೇ ಸುಸ್ಥಿರ ಆರ್ಥಿಕ ಚೇತರಿಕೆಯ ನಿರೀಕ್ಷೆ ಎಲ್ಲರಲ್ಲೂ ಇದೆ.

ಕೊರೊನಾ ಲಾಕ್‌ಡೌನ್ ಹೇರಿದ ನಂತರ ಕೇಂದ್ರ ಸರ್ಕಾರ ಮೂರು ಆತ್ಮನಿರ್ಭರ್ ಪ್ಯಾಕೇಜ್‌ಗಳನ್ನು ಪ್ರಕಟಿಸಿತ್ತು. ಇವುಗಳ ಒಟ್ಟು ಮೊತ್ತ 21 ಲಕ್ಷ ಕೋಟಿ ರೂ. ಎಂದು ಸರ್ಕಾರ ತಿಳಿಸಿತ್ತು. ಆದರೆ, ಸರ್ಕಾರದ ಬೊಕ್ಕಸಕ್ಕೆ ಆದ ವೆಚ್ಚ ಕೇವಲ 3.5 ಲಕ್ಷ ಕೋಟಿ ರೂ. ಆಗಿತ್ತು.

ಆರೋಗ್ಯ ಮೂಲಭೂತ ಸೌಲಭ್ಯ, ಬೇಡಿಕೆ ಹೆಚ್ಚಿಸುವುದು, ಬ್ಯಾಂಕಿಂಗ್ ವಲಯ ಸುಧಾರಣೆ, ವಿತ್ತೀಯ ಸ್ಥಿರತೆ ಹಾಗೂ 15ನೇ ಹಣಕಾಸು ಆಯೋಗದ ವರದಿ ಜಾರಿ ಸೇರಿದಂತೆ ಹಲವಾರು ಸಮಸ್ಯೆಗಳನ್ನು ಬಜೆಟ್ ಎದುರಿಸಬೇಕಿದೆ ಎಂದು ಬ್ರಿಕ್‌ವರ್ಕ್ ರೇಟಿಂಗ್ಸ್ ತಿಳಿಸಿದೆ.


ಹುಟ್ಟುಹಬ್ಬದ ಶುಭಾಶಯಗಳು



ದಿನಾಂಕ 1.2.2021ರಂದು ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ವಿನೋಬನಗರದ ಶ್ರೀ ಚೌಡೇಶ್ವರಿ ದೇವಸ್ಥಾನದ ನೂತನ ಅಧ್ಯಕ್ಷರೂ, ನಾಯಕ ಸಮಾಜ ಮತ್ತು ಬಿಜೆಪಿ ಜಿಲ್ಲಾ ಉಪಾಧ್ಯಕ್ಷರೂ ಆದ

ಶ್ರೀ ಶ್ರೀನಿವಾಸ್ ದಾಸಕರಿಯಪ್ಪ

ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು.

ಪದಾಧಿಕಾರಿಗಳು
ಶ್ರೀ ಚೌಡೇಶ್ವರಿ ದೇವಸ್ಥಾನ ಸಮಿತಿ,
ವಿನೋಬನಗರ, 1ನೇ ಮುಖ್ಯರಸ್ತೆ, ದಾವಣಗೆರೆ.

ಹೃತ್ಪೂರ್ವಕ ಕೃತಜ್ಞತೆಗಳು

ದಿನಾಂಕ 31.01.2021 ರಂದು ಭಾನುವಾರ ನಡೆದ ದಿ ದಾವಣಗೆರೆ ಕ್ಲಬ್ ಆಡಳಿತ ಮಂಡಳಿಯ ಚುನಾವಣೆಯಲ್ಲಿ ತಮ್ಮ ಅಮೂಲ್ಯವಾದ ಮತವನ್ನು ನಮ್ಮ ಗುಂಪಿನ ಅಭ್ಯರ್ಥಿಗಳಿಗೆ ನೀಡಿದ ಕ್ಲಬ್‌ನ ಸರ್ವ ಸದಸ್ಯರಿಗೂ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

- ಮತ್ತಿಹಳ್ಳಿ ವೀರಣ್ಣ
- ಚಂದ್ರಶೇಖರ್ ಎ.ಬಿ.
- ಉಳವಯ್ಯ ಎಸ್.ಜಿ.
- ಲಿಂಗರಾಜ್ ವಾಲಿ ಹೆಚ್.ಸಿ.
- ಪ್ರಶಾಂತ ಗುಪ್ತಾ ಎಸ್.ಕೆ.
- ರುದ್ರೇಶ್ ಹೆಚ್.ವಿ.
- ರಾಜಶೇಖರ್ ಎಂ.ಕೆ.
- ಜಯರಾಜ್ ಎಸ್. ಕಶೆಟ್ಟರ್
- ಕೊಟ್ರೇಶ್ ಎನ್.
- ಶಿವಯೋಗಿ ಬಿ.ವಿ.
- ಶ್ರೀನಿವಾಸಮೂರ್ತಿ ಆರ್.ಜಿ.

ssims SPARSH
CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಶಸ್ತ್ರಚಿಕಿತ್ಸಕರು
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಮೊಣಕಾಲು ನೋವು
- ಭುಜದ ನೋವು
- ಸ್ಪೋರ್ಟ್ಸ್ ಇಂಜುರೀಸ್
- ಕೀಲು ಮರುಜೋಡಣೆ
- ಹಿಪ್ ಮರುಜೋಡಣೆ
- ರಿವಿಷನ್ ಶಸ್ತ್ರಚಿಕಿತ್ಸೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಗುರುವಾರ, 04 ಫೆಬ್ರವರಿ 2021 ಸಮಯ: ಬೆಳಿಗ್ಗೆ 11ರಿಂದ ಮಧ್ಯಾಹ್ನ 2ರ ವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್,
ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ
ನೋಂದಣಿಗಾಗಿ ಕರೆಮಾಡಿ: 96869 29090
ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ(TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ










JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte